ಶಿಕ್ಷಣ ರಥ ನೀತಿ ಪಥ

ಎಚ್.ಎನ್.ಯಾದವಾಡ

NIRUTTA Publications

ಶಿಕ್ಷಣ ರಥ ನೀತಿ ಪಥ

(ಮಕ್ಕಳ ಸರ್ವತೋಮುಖ ಬೆಳವಣಿಗೆ : ಪಾಲಕರಿಗೊಂದು ಪಾಠ)

: ಲೇಖಕರು :

ಎಚ್.ಎನ್. ಯಾದವಾಡ

ವಿಶ್ರಾಂತ ಸಹ ನಿರ್ದೇಶಕರು, ಭಾರತ ಸರಕಾರ

ಹಾಗೂ

ಸಮನ್ವಯ ಅಧಿಕಾರಿಗಳು (ನೌಕರರ ಕ್ಷೇಮಾಭಿವೃದ್ಧಿ)

ಬಿ. ವ್ಹಿ. ವ್ಹಿ. ಸಂಘ, ಬಾಗಲಕೋಟೆ

www.nirutapublications.org, www.mhrspl.com

Shikshana Ratha Neethi Patha

by H.N. Yadawada

ISBN	: 978-93-84262-74-7
First Edition	: 2021
Size	: 1/8 Demy
Price	: Rs. 110/-
Copies	: 1000
Paper	: N.S. Maplitho 70 GSM
Pages	: 144
Rights	: Author
ಪ್ರಥಮ ಮುದ್ರಣ	: ೨೦೨೧
ಆಕಾರ	: ೧/೮ ಡೆಮಿ
ಪುಟಗಳು	: ೧೪೪
ಕಾಗದ	: ಎನ್.ಎಸ್. ಮ್ಯಾಪ್ಲಿತೊ ೭೦ ಜಿ.ಎಸ್.ಎಂ.
ಹಕ್ಕುಗಳು	: ಕೃತಿಕಾರನವು
ಬೆಲೆ	: ರೂ. ೧೧೦/–
ಮುಖಪುಟ ವಿನ್ಯಾಸ	: ಹಾದಿಮನಿ

ಮುದ್ರಣ ಮತ್ತು ಪ್ರಕಾಶಕರು : **ನಿರುತ ಪಬ್ಲಿಕೇಷನ್ಸ್,** ನಂ. 326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು, ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ, ಬೆಂಗಳೂರು–560056. ದೂ : 080–23213710, 8073067542, ಮೊ: 9980066890

Email: ramesha.mh@gmail.com, nirutapublications@gmail.com

Website: www.nirutapublications.org, www.mhrspl.com

ನೀತಿ ಪಥದ ಹಾದಿಯಲ್ಲಿ.....

ಶ್ರೀಯುತ ಎಚ್.ಎನ್.ಯಾದವಾಡರು ಮೂಲತಃ ಬಾಗಲಕೋಟೆ ಸಮೀಪದಲ್ಲಿರುವ ಬೆಣ್ಣೂರಿನವರಾಗಿದ್ದು, ಗ್ರಾಮೀಣ ಬದುಕಿನ ಸಾಂಸ್ಕೃತಿಕ ಸೊಗಸನ್ನು, ಸಾಮರಸ್ಯ ಸಹಬಾಳ್ವೆಯ ಜೀವನವನ್ನು ರಕ್ತಗತಗೊಳಿಸಿಕೊಂಡವರು. ಸುಮಾರು 25 ವರ್ಷಕ್ಕೂ ಹೆಚ್ಚು ಅವಧಿಯನ್ನು ಬೆಂಗಳೂರಿನಂಥ ನಗರ ಪ್ರದೇಶದಲ್ಲಿ ಕಳೆದರೂ ಗ್ರಾಮೀಣ ಹಾಗೂ ನಗರದ ಬದುಕಿನಲ್ಲಿ ಸಾಮ್ಯತೆಗಳನ್ನು ಅಳೆದು ತೂಗಿ ನೋಡಿ ಗುಣಾತ್ಮಕ ಜೀವನದ ಅನುಸರಣೆ ಮುಖ್ಯ ಎಂಬುದನ್ನು ಅನುಭವದಿಂದ ಅರಿತವರು.

ಭಾರತ ಸರಕಾರದ ಕಾರ್ಮಿಕ ಹಾಗೂ ಉದ್ಯೋಗ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತ ಸಹ ನಿರ್ದೇಶಕರಾಗಿ ನಿವೃತ್ತರಾದರು. ಅಂಕಿ–ಸಂಖ್ಯೆಯ ಮಧ್ಯೆ ಕೂಡು–ಕಳೆಯುವ ಲೆಕ್ಕಾಚಾರದ ಬದುಕಿನ ಒತ್ತಡದಲ್ಲಿ ಗುಪ್ತಗಾಮಿನಿಯಾಗಿ ಸಾಹಿತ್ಯ ಸರಸ್ವತಿ ಲೇಖಕರೆದೆಯಲ್ಲಿ ಹರಿದು ಬಂದಿದ್ದಾಳೆ.

'ದೊಡ್ಡಕ್ಕ ರಾಜಮಾ' ಕಾದಂಬರಿಯಲ್ಲಿ ಲೇಖಕರು ತನ್ನೂರಿನ ಸಂಸ್ಕೃತಿಯ ಪ್ರತಿನಿಧಿಯಾಗಿ, ದೊಡ್ಡಕ್ಕನನ್ನು ನಿಲ್ಲಿಸಿದರೆ, 'ಹರಿದ ನೀರು' ಕಥಾ ಸಂಕಲನದಲ್ಲಿ ತಮ್ಮ ಬದುಕಿನಲ್ಲಿ ಜೊತೆಗೆ ಪಯಣಿಸಿದ ಹಲವು ಪಾತ್ರಗಳನ್ನು ಕಥೆಗಳ ಮೂಲಕ ಜೀವಂತಗೊಳಿಸಿದ್ದಾರೆ. ಇನ್ನೊಂದೆಡೆ ನೆಮ್ಮದಿಯ ಬದುಕಿಗೆ ಸ್ನೇಹ ಸಂಬಂಧಗಳಲ್ಲಿ ಪ್ರೀತಿ, ವಿಶ್ವಾಸದ ಜೊತೆಗೆ ಆರ್ಥಿಕ ಸಬಲತೆಯ ಅಗತ್ಯತೆಯನ್ನು 'ಇ.ಎಸ್.ಐ. ಮಾರ್ಗದರ್ಶಿ' ಕೃತಿ ರಚನೆ ಮಾಡುವ ಮೂಲಕ ಸೌಲಭ್ಯದ ಸ್ವರೂಪ, ಪ್ರಯೋಜನಗಳ ಕುರಿತು ಮಾಹಿತಿ ನೀಡಿದ್ದಾರೆ.

'ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ' ಎಂಬಂತೆ ವೃತ್ತಿ ಕ್ಷೇತ್ರವೇ ಬೇರೆ, ಹವ್ಯಾಸಿ ಕ್ಷೇತ್ರವೇ ಬೇರೆ, ಆದರೂ ಎರಡನ್ನೂ ಸಮದೂಗಿಸಬಲ್ಲ ಸವ್ಯಸಾಚಿ ಶ್ರೀ ಎಚ್.ಎನ್. ಯಾದವಾಡ ಅವರಾಗಿದ್ದಾರೆ. ಲೆಕ್ಕದ ಲೋಕದಲ್ಲಿ ಅಸಾಧ್ಯವಾದದ್ದನ್ನು ಸಾಹಿತ್ಯ ಲೋಕದಲ್ಲಿ ಸಾಧ್ಯಗೊಳಿಸಿದ್ದಾರೆ. ಲೇಖಕರ ಈ ಸೃಜನಶೀಲ ಪಯಣದಲ್ಲಿ ಮತ್ತೊಂದು ಮೈಲಿಗಲ್ಲು 'ಶಿಕ್ಷಣ ರಥ ನೀತಿ ಪಥ'. ಈ ಕೃತಿಯ ಮೂಲಕ ಶಿಕ್ಷಣದ ಮಹತ್ವವನ್ನು ವಿವರಿಸಿದ್ದಾರೆ.

'ಮನುಷ್ಯನಲ್ಲಿ ಪರಿಪೂರ್ಣತೆಯನ್ನು ಮೂಡಿಸುವುದೇ ಶಿಕ್ಷಣ' ಎಂಬ ಸ್ವಾಮಿ ವಿವೇಕಾನಂದರ ಹೊನ್ನುಡಿ ಶಿಕ್ಷಣದ ಮಹತ್ವವನ್ನು ತಿಳಿಸುತ್ತದೆ. ಪರಿಪೂರ್ಣತೆ ಎಂಬುದು ಕೇವಲ ಅಂಕ ಗಳಿಸುವ ಹಾಗೂ ರ್‍ಯಾಂಕ್ ಪಡೆದು ಚಪ್ಪಾಳೆ ಗಿಟ್ಟಿಸಿಕೊಳ್ಳುವ ಮೂಲಕ ಸಾಧಿಸುವಂತಹದ್ದಲ್ಲ. ಮನುಷ್ಯನ ಆಂತರಿಕ ಹಾಗೂ ಬಾಹ್ಯ ಸ್ತರಗಳೆರಡರಲ್ಲಿ ಅನುಭವ ಹಾಗೂ ಅನುಕರಣೆಯಿಂದ ಕಲಿಕಾ ಪ್ರಕ್ರಿಯೆ ನಿರಂತರವಾಗಿ ನಡೆದಾಗ ಪರಿಪೂರ್ಣತೆಯ ಹಂತವನ್ನು ತಲುಪಲು ಸಾಧ್ಯವಾಗುತ್ತದೆ. ನಮ್ಮ ಪ್ರಾಚೀನ ಪರಂಪರೆಯಲ್ಲಿನ ಶರಣರು 'ನಡೆ–ನುಡಿ ಒಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂದಿರುವುದು ವ್ಯಕ್ತಿಯು ಆಡುವ ಮಾತಿಗೂ ನಡೆದುಕೊಳ್ಳುವ ರೀತಿಗೂ ಸಂಬಂಧವಿರಬೇಕು. 'ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ' ಯಾದರೆ ಪರಮಾತ್ಮ ಮೆಚ್ಚುವುದಿಲ್ಲ ಎಂಬುದನ್ನು ಗಮನಿಸಿದಾಗ ವ್ಯಕ್ತಿಯ ವ್ಯಕ್ತಿತ್ವ ಪರಿಪೂರ್ಣತೆಯ ಹಂತ ತಲುಪಿತೆಂದರೆ ನಡೆ–ನುಡಿ ಒಂದೇ ಆಗಿರುತ್ತದೆ. ಇಲ್ಲದಿದ್ದರೆ ಪರಿಪೂರ್ಣತೆ ಅಸಾಧ್ಯ. ಪರಿಪೂರ್ಣತೆ ಪಡೆಯಲು ಮಾತು–ವರ್ತನೆ ಅಭಿನ್ನವಾಗಿರಬೇಕು. ಸಮಾಜ ಜೀವಿಯಾದ ಮಗು ಮಾನವನಾಗಿ ಬೆಳೆಯುವಲ್ಲಿ ಈ ಮಾತು ತುಂಬ ಮುಖ್ಯ ಪಾತ್ರವಹಿಸುತ್ತದೆ.

ನಾವು ಇಂದು ಪರಿಭಾವಿಸುತ್ತಿರುವ ನಾಗರೀಕತೆ ಎಂಬುದು ಉಡುವ ಬಟ್ಟೆ, ತೊಡುವ ಆಭರಣ ಮಾತನಾಡುವ ಭಾಷೆಯಿಂದ ಮಾಪನ ಮಾಡಿದರೆ ಅದು ಭಾಗಶಃ ಆಗುತ್ತದೆ. ಪರಂಪರೆಯ ಮೌಲ್ಯಗಳನ್ನು ಬದುಕಿನ ತಿರುಳಾಗಿಸಿಕೊಂಡು ಆಧುನಿಕ ಕಲೆ, ತಂತ್ರಜ್ಞಾನ ಹಾಗೂ ವಿಜ್ಞಾನಗಳನ್ನು ಮೇಳೈಸಿ ರೂಪಗೊಂಡ ಶಿಕ್ಷಣವನ್ನು ಮಗು ಪಡೆದಾಗಲೇ ಮಾನವೀಯತೆಯಿಂದೊಡಗೂಡಿದ ಮನುಜನಾಗಲು ಸಾಧ್ಯವಾಗುತ್ತದೆ. ಆಗ ಮಾತ್ರ ಮಗುವೊಂದು ಇಂದಿನ ಸಮಾಜದಲ್ಲಿ ಯಶಸ್ವಿ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ.

ಈ ನಿಟ್ಟಿನಲ್ಲಿ ಶ್ರೀಯುತ ಎಚ್.ಎನ್.ಯಾದವಾಡ ಅವರ 'ಶಿಕ್ಷಣ ರಥ ನೀತಿ ಪಥ' ಕೃತಿ ಹೆಚ್ಚು ಪ್ರಸ್ತುತಗೊಳ್ಳುತ್ತದೆ. ಇಡೀ ಕೃತಿ ಒಟ್ಟು ಹತ್ತು ಅಧ್ಯಾಯಗಳಲ್ಲಿ ರಚನೆಗೊಂಡಿದ್ದು, ಮಗುವಿನ ದೈಹಿಕ, ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಯ ಜೊತೆಗೆ ಸಂಸ್ಕಾರವಂತ ಮಗುವನ್ನಾಗಿ ರೂಪಿಸುವಲ್ಲಿ ಕುಟುಂಬ ಹಾಗೂ ಸಮಾಜದ ಜವಾಬ್ದಾರಿಗಳೇನು? ಎಂಬುದನ್ನು ವಿವರಿಸಿದ್ದಾರೆ.

'ಮಕ್ಕಳ ಸ್ಕೂಲ್ ಮನೇಲಲ್ವೆ' ಎಂಬ ಟಿ.ಪಿ.ಕೈಲಾಸಂ ಅವರ ಮಾತು 'ಮನೆಯೆ ಮೊದಲ ಪಾಠಶಾಲೆ' ಎಂಬ ಅಧ್ಯಾಯದಲ್ಲಿ ಸ್ಪಷ್ಟ ಅರ್ಥವನ್ನು ಪಡೆದುಕೊಂಡಿದೆ.

ಭದ್ರವಾದ ತಳಹದಿಯ ಮೇಲೆ ನಿರ್ಮಿಸಿದ ಮಂದಿರವು ಹೇಗೆ ನೂರಾರು ವರ್ಷ ಬಾಳುತ್ತದೆಯೋ ಹಾಗೆಯೇ ಮಗುವಿನ ಭವ್ಯ ಭವಿಷ್ಯ ಸದೃಢವಾಗಿ ನಿರ್ಮಾಣವಾಗಬೇಕಾದರೆ ಬಾಲ್ಯದಲ್ಲಿ ಕುಟುಂಬದ ವಾತಾವರಣದಲ್ಲಿನ ಸಂಸ್ಕೃತಿಯ ತಳಹದಿ ಗಟ್ಟಿಯಾಗಿರಬೇಕಾಗುತ್ತದೆ.

ಮಗು ವಿಶ್ವಮಾನವನಾಗಲು ಶಿಸ್ತು, ಸಂಯಮ, ತಾಳ್ಮೆ, ಸಕಾರಾತ್ಮಕ ಚಿಂತನೆ, ನೈತಿಕ ಮನೋಬಲ, ಆತ್ಮವಿಶ್ವಾಸ, ಸಹಕಾರ ಮನೋಭಾವ, ಪರಸ್ಪರ ಗೌರವಿಸುವ ಗುಣ, ಕಷ್ಟದಲ್ಲಿರುವ ವ್ಯಕ್ತಿಗೆ ಸಹಾಯ ಮಾಡುವ ಗುಣ ಇತ್ಯಾದಿ ಎಲ್ಲ ಗುಣಗಳನ್ನು ಮಗು ಅಳವಡಿಸಿಕೊಳ್ಳಬೇಕು. ಇವೆಲ್ಲ ಗುಣಗಳನ್ನು ಕುಟುಂಬ ಹಾಗೂ ಸಮಾಜ ಮಗುವಿನ ವರ್ತನೆಯಲ್ಲಿ ಅನುಸರಿಸುವಂತೆ ಮತ್ತು ಅನುಕರಿಸುವಂತೆ ನೋಡಿಕೊಳ್ಳಬೇಕು. ಈ ಹಂತದಲ್ಲಿ ಕುಟುಂಬದ ಸದಸ್ಯರ ಕರ್ತವ್ಯ ಹಾಗೂ ಜವಾಬ್ದಾರಿಗಳೇನು ಎಂಬುದನ್ನು ಬಹಳ ಅರ್ಥಪೂರ್ಣವಾಗಿ ಈ ಕೃತಿಯಲ್ಲಿ ನಿರೂಪಿಸಿದ್ದಾರೆ. ಓದುಗನನ್ನು ದೃಷ್ಟಿಯಲ್ಲಿರಿಸಿ ಲೇಖಕರು ಸರಳ ನಿರೂಪಣೆಯ ಜೊತೆಗೆ ಕಥನಾತ್ಮಕ ಮಾದರಿಯನ್ನು ಅನುಸರಿಸಿದ್ದಾರೆ.

ಭಿಕ್ಷುಕ ಕನಕನ ಕಥೆ, ಕಳ್ಳ ಸುರೇಶನ ಕಥೆ, ಚಂದ್ರಶೇಖರನ ಕಥೆ, ರಾಜಕುಮಾರನ ಕಥೆ, ರೈತನ ಮಕ್ಕಳ ಕಥೆ, ರಶ್ಮಿಯ ಕಥೆ, ಮನೆಬಿಟ್ಟು ಹೋದ ಮಗುವಿನ ಕಥೆ, ಗಿಳಿಗಳ ಕಥೆ ಮುಂತಾದ ಹತ್ತಾರು ಕಥೆಗಳ ವಸ್ತು ಸಾರವನ್ನು ನಿರೂಪಿಸುತ್ತಾ ಪ್ರಸ್ತುತ ಸಂದರ್ಭಕ್ಕೆ ಸಮೀಕರಿಸಿ ಮುಂದಾಗಬಹುದಾದ ಪರಿಣಾಮದ ಕುರಿತು ಮಾತನಾಡುತ್ತಾರೆ. ಇಡೀ ಕೃತಿಯಲ್ಲಿ ಸೋದಾಹರಣವಾಗಿ ಬಳಸಿದ ಕಥೆಗಳು ಮುಂದೇನು ಎಂಬ ಕುತೂಹಲ ಹುಟ್ಟಿಸುವುದಲ್ಲದೇ ಸಮಯೋಚಿತವಾಗಿ ಬಳಕೆಗೊಂಡು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ.

ಮಗುವಿನ ಪರಿಪೂರ್ಣ ವ್ಯಕ್ತಿತ್ವದ ನಿರ್ಮಾಣಕ್ಕೆ ಶಿಕ್ಷಣ ಅಗತ್ಯ ಎಂದು ಹೇಳುವುದಷ್ಟೆ ಅಲ್ಲ ಮಗು ಹೆಣ್ಣಾಗಲಿ, ಗಂಡಾಗಲಿ ಇಬ್ಬರಿಗೂ ಸಮಾನ ನೆಲೆಯಲ್ಲಿ ಶಿಕ್ಷಣ ದೊರಕಬೇಕು ಎಂಬ ಸದಾಶಯವೂ ಇಲ್ಲಿದೆ. ಉತ್ತಮ ಮೌಲ್ಯಗಳನ್ನೊಳಗೊಂಡ ನೈತಿಕ ಪ್ರಜ್ಞೆ 'ಮಗುವಿನ ಅಂತರಾಳದಲ್ಲಿ ಸದಾ ಜಾಗೃತವಿದ್ದಾಗ ಮಾತ್ರ ಮಗುವಿನಲ್ಲಿ ಪರಿಪೂರ್ಣತೆ ರೂಪುಗೊಳ್ಳಲು ಸಾಧ್ಯವಾಗುತ್ತದೆ ಎಂಬುದನ್ನು ಕನ್ನಡಿಯಂತೆ ಸ್ಪಷ್ಟವಾಗಿ ಕೃತಿಯಲ್ಲಿ ಚಿತ್ರಿಸಿದ್ದಾರೆ.

ಪ್ರಕೃತಿ ಸಹಜ ದೈಹಿಕ ಕ್ರಿಯೆಗಳಾದ ಹಸಿವು, ಬಾಯಾರಿಕೆಗಳು ಪ್ರತಿ ಮಗುವಿನಲ್ಲಿ ಸಹಜವಾಗಿರುವಂಥವು. ಮಗುವು ತನ್ನ ಬೌದ್ಧಿಕ ಬೆಳವಣಿಗೆಯ ಹಂತದಲ್ಲಿ

ಹಸಿವು, ಬಾಯಾರಿಕೆಯನ್ನು ಸ್ವ ಇಚ್ಛೆಯಿಂದ ಸಮಯೋಚಿತವಾಗಿ ನಿಯಂತ್ರಿಸುವ ಹಾಗೂ ಪೂರೈಸಿಕೊಳ್ಳುವ ಬಗೆಯನ್ನು ಅರಿಯುವಂತೆ ಇಲ್ಲಿ ಚಿತ್ರಿಸಿದ್ದಾರಲ್ಲದೆ, ಪಾಲಕರು ಮಕ್ಕಳನ್ನು ಊಟ ಕೊಡದೆ ಶಿಕ್ಷಿಸುವ ಮೂಲಕ ಶಿಕ್ಷಣವನ್ನು ನೀಡುವ ಕ್ರಮವನ್ನು ಕೈಬಿಟ್ಟು ಮಗು ಸ್ವಇಚ್ಛೆಯಿಂದ ಶಿಕ್ಷಣ ಕಲಿಕೆಯಲ್ಲಿ ತೊಡಗುವಂತೆ ಮಾಡಬೇಕಾದ ಜವಾಬ್ದಾರಿಯಿದೆ. ಈ ಜವಾಬ್ದಾರಿಯನ್ನು ಲೇಖಕರು ಕೃತಿಯಲ್ಲಿ ಸೂಕ್ಷ್ಮವಾಗಿ ತಿಳಿಸಿದ್ದಾರೆ. ಮಗು ತನ್ನ ಬದುಕಿನಲ್ಲಿ ಉಂಟಾಗುವ ಪ್ರಕೃತಿ ಸಹಜ ಅಥವಾ ವ್ಯಕ್ತಿ ಸಹಜ ಸನ್ನಿವೇಶಗಳಿಗೆ ತಾಳ್ಮೆಯಿಂದ ಪ್ರತಿಸ್ಪಂದಿಸುವುದನ್ನು ತರಬೇತಿಗೊಳಿಸಬೇಕು. ಇಂತಹ ಸಂಯಮ, ತಾಳ್ಮೆಯ ವರ್ತನೆಯಿಂದ ಮಗು ತನ್ನ ಸಮಕಾಲೀನ ಘಟನೆಗಳಿಗೆ ಪ್ರತಿಸ್ಪಂದಿಸುವಾಗ ಉದ್ವೇಗಕ್ಕೊಳಗಾಗದೆ ನಿರ್ವಹಿಸಬಲ್ಲ ಜಾಣ್ಮೆಯನ್ನು ತಾನೆ ರೂಪಿಸಿಕೊಳ್ಳುವಂತಾಗುತ್ತದೆ. ಪ್ರಶಾಂತ ಕೊಳದಲ್ಲಿ ಕಲ್ಲೊಂದು ಬಿದ್ದಾಗ ಏಳುವ ಅಲೆಗಳಂತೆ ಮಗುವಿನ ಮನದಲ್ಲಿ ಸಂಘರ್ಷದ ಅಲೆಗಳು ಏಳುವಾಗ ತನ್ನ ಮನೋಬಲದಿಂದ ಎಲ್ಲವನ್ನೂ ನಿವಾರಿಸಿಕೊಂಡು ಮುಂದಡಿಯಿಡುವಲ್ಲಿ ಪೋಷಕರು ಮತ್ತು ಸಮಾಜದ ಜವಾಬ್ದಾರಿ ತುಂಬ ಮಹತ್ವದ್ದಾಗಿದೆ ಎಂಬುದನ್ನು ಕೃತಿ ಮನಗಾಣಿಸುತ್ತದೆ.

ಇಡೀ ಕೃತಿಯ ವಿವರಣೆಯಲ್ಲಿ ಸಣ್ಣ ಸಣ್ಣ ಸಂಗತಿಗಳನ್ನು ಗಮನಿಸಿ ಅಸಾಧಾರಣವಾಗಿ ನಿರೂಪಿಸಿದ್ದಾರೆ. 'ಇಂದಿನ ಮಗು ನಾಳಿನ ನಾಡ ನಿರ್ಮಾತೃ'ವಾಗಿದ್ದು, ನಮ್ಮ ಭಾರತ ಶ್ರೇಷ್ಠ ಭಾರತವಾಗುವಲ್ಲಿ ಪ್ರತಿಯೊಂದು ಮಗುವಿನಲ್ಲಿ ನೈತಿಕ ಸದೃಢತೆ ಬೆಳೆಸಲು ಈ ಕೃತಿ ಮಾರ್ಗದರ್ಶಿಯಾಗುತ್ತದೆ. ಲೇಖಕರ ಸೃಜನಶೀಲ ಪ್ರತಿಭೆಯಿಂದ ಸಮಾಜ ಆ ಮೂಲಕ ದೇಶದ ಅಭಿವೃದ್ಧಿಗೆ ಪೂರಕವಾಗುವಂತಹ ಮತ್ತಷ್ಟು ಕೃತಿಗಳು ಲೇಖಕರಿಂದ ಹೊರಬರಲಿ ಎಂದು ಹಾರೈಸುವೆ.

ಡಾ.ಮೀನಾ ಚಂದಾವರಕರ್
ವಿಶ್ರಾಂತ ಉಪಕುಲಪತಿಗಳು,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ ಹಾಗೂ
ಮುಖ್ಯ ಸಲಹೆಗಾರರು–ಗುಣಮಟ್ಟ ನಿರ್ವಹಣೆ
ಬಿ.ವ್ಹಿ.ವ್ಹಿ.ಸಂಘ, ಬಾಗಲಕೋಟೆ

"ಶಿಕ್ಷಣ ರಥ ನೀತಿ ಪಥ"
ಒಂದು ಉತ್ತಮ ಮಾರ್ಗದರ್ಶಿ ಕೃತಿ

ಜನಸಾಮಾನ್ಯರ ಪರಿಭಾಷೆಯಲ್ಲಿ 'ಶಿಕ್ಷಣ' ಎಂದರೆ ತಿಳಿಯುವುದು, ಕಲಿಯುವುದು, ಕಲಿಯುವಿಕೆ. ಹೊಸ ವಿಚಾರಗಳನ್ನು ತಿಳಿದುಕೊಳ್ಳುವ ಪ್ರಕ್ರಿಯೆಗೆ ಜ್ಞಾನಾರ್ಜನೆ ಎಂದು ಕರೆಯುವುದು ವಾಡಿಕೆ. ವ್ಯಕ್ತಿತ್ವದ ಉನ್ನತಿಗೆ ಅವಶ್ಯಕವಾಗುವ ಎಲ್ಲಾ ಚಟುವಟಿಕೆಗಳ ಮೊತ್ತಕ್ಕೆ ಶಿಕ್ಷಣ ಎನ್ನಬಹುದಾಗಿದೆ. ಶಿಕ್ಷಣ ಪ್ರಕ್ರಿಯೆಯಲ್ಲಿ ದೈಹಿಕ, ಮಾನಸಿಕ, ಭಾವನಾತ್ಮಕ, ಬೌದ್ಧಿಕ, ನೈತಿಕ, ಆಧ್ಯಾತ್ಮಿಕ ಇತ್ಯಾದಿ ವಿವಿಧ ಆಯಾಮಗಳನ್ನು ಗುರುತಿಸಬಹುದಾಗಿದೆ. ಪ್ರತಿಯೊಬ್ಬರ ಸರ್ವತೋಮುಖ ಅಭ್ಯುದಯಕ್ಕೆ, ವ್ಯಕ್ತಿತ್ವ ವಿಕಸನಕ್ಕೆ ಶಿಕ್ಷಣ ಅವಶ್ಯಕವಾಗುತ್ತದೆ. ಈ ಮಾತು ಮಕ್ಕಳ ಸಮಗ್ರ ಬೆಳವಣಿಗೆಗೂ ಅನ್ವಯಿಸುತ್ತದೆ.

ಶಿಕ್ಷಣ ಪ್ರಕ್ರಿಯೆಯಲ್ಲಿ ದೈಹಿಕ ಆಯಾಮವು, ಸದೃಢ ದೇಹ, ಉತ್ತಮ ಆರೋಗ್ಯ, ವೈಯಕ್ತಿಕ ಸ್ವಚ್ಛತೆ, ವೇಷಭೂಷಣ, ಹಾವಭಾವ, ಸ್ಥಿರವಾದ ನಡೆ, ನಗುಮುಖ ಮುಂತಾದ ಅಂಶಗಳನ್ನು ಒಳಗೊಂಡಿದೆ. ಮಾನಸಿಕ ಆಯಾಮದಲ್ಲಿ ಸಕಾರಾತ್ಮಕ ಮನೋಭಾವ, ಯೋಚಿಸಿ ಮುನ್ನಡೆಯುವ ಗುಣ, ಭಾವನೆಗಳ ಮೇಲೆ ನಿಯಂತ್ರಣ, ಸೃಜನಶೀಲತೆ, ಅಭಿವ್ಯಕ್ತಿ ಸಾಮರ್ಥ್ಯ, ಸಂವಹನ ಕೌಶಲ್ಯ, ಆಚಾರ–ವಿಚಾರಗಳಲ್ಲಿ ಶಿಸ್ತು, ಸಭ್ಯತೆ, ನಾಯಕತ್ವ ಗುಣ, ಸಂಬಂಧಗಳಲ್ಲಿ ಶಿಷ್ಟಾಚಾರ, ಸಮಸ್ಯೆಗಳಿಗೆ ಕಾರ್ಯಯೋಗ್ಯ ಪರಿಹಾರವನ್ನು ಕಂಡುಕೊಳ್ಳುವ ಹವ್ಯಾಸ ಮುಂತಾದವು ಸೇರಿವೆ. ಹಾಗೇನೇ ನೈತಿಕ ಆಯಾಮ, ಸತ್ಯ, ನ್ಯಾಯ, ತ್ಯಾಗ, ಅಹಿಂಸೆ, ತಾಳ್ಮೆ, ಕ್ಷಮಾಗುಣ, ಕರ್ತವ್ಯಪರತೆ, ನಿಸ್ವಾರ್ಥತೆ, ಪರೋಪಕಾರ, ದಾನ, ತಾರತಮ್ಯ ವಿವೇಕ, ಸಮರ್ಪಣಾ ಭಾವ, ಸಮಷ್ಟಿಹಿತ ಇತ್ಯಾದಿ ವಿಚಾರಗಳಿಂದ ಮುಪ್ಪರಿಗೊಂಡಿದೆ. ಇನ್ನು ಆಧ್ಯಾತ್ಮಿಕ ಆಯಾಮದಲ್ಲಿ ಧರ್ಮ ಶ್ರದ್ಧೆ, ಭಕ್ತಿ, ವ್ಯಾಕುಲತೆ, ನಿಷ್ಠೆ, ಶರಣಾಗತಿ, ಸಮರ್ಪಣೆ, ಪ್ರಾರ್ಥನೆ ಮುಂತಾದ ಸಂಗತಿಗಳು ಸೇರಿವೆ. ವ್ಯಕ್ತಿತ್ವ ವಿಕಸನಕ್ಕೆ ಈ ಎಲ್ಲ ವಿಚಾರಗಳು, ವಿವಿಧ ಪ್ರಮಾಣದಲ್ಲಿ ಅವಶ್ಯಕವಾದುದರಿಂದ, ಶಿಕ್ಷಣ ವಿಧಾನದಲ್ಲಿ ಇದನ್ನು ಸೇರಿಸಿಕೊಳ್ಳುವುದು

ಅವಶ್ಯಕವಾಗುತ್ತದೆ. ವ್ಯಕ್ತಿತ್ವ ವಿಕಸನಕ್ಕೆ ಮೂಲಾಧಾರ ಅವನ ಶಿಕ್ಷಣ ಮತ್ತು ಅಂತಃಶಕ್ತಿ. ಅದಕ್ಕೆ ಇಚ್ಛಾಶಕ್ತಿ, ಜ್ಞಾನ ಶಕ್ತಿ ಮತ್ತು ಕ್ರಿಯಾಶಕ್ತಿ ಎಂದು ಮೂರು ಮಜಲುಗಳನ್ನು ಗುರುತಿಸುವುದು ಸಂಪ್ರದಾಯ. ಹಾಗಾಗಿ ಶಿಕ್ಷಣಕ್ಕೆ ಪ್ರತಿಯೊಬ್ಬರೂ ಆದ್ಯತೆಯನ್ನು ಕೊಡಬೇಕಾಗುತ್ತದೆ. ಸಾಮಾನ್ಯವಾಗಿ ಬಾಲ್ಯದಲ್ಲಿ ಶಿಕ್ಷಣಕ್ಕೆ ಪ್ರಾಶಸ್ತ್ಯವನ್ನು ಕೊಡುವುದು ರೂಢಿ. ಉತ್ತಮ ಹಾಗೂ ಸೂಕ್ತ ಶಿಕ್ಷಣ ದೊರೆತಲ್ಲಿ ಅಂತಹ ವ್ಯಕ್ತಿಯ ಮುಂದಿನ ಜೀವನ ಸುಖ, ಶಾಂತಿ, ಸಮಾಧಾನಗಳಿಂದ ಕೂಡಿರುತ್ತದೆ.

ಈ ಹಿನ್ನೆಲೆಯಲ್ಲಿ ಮಿತ್ರರಾದ ಶ್ರೀ ಎಚ್.ಎನ್. ಯಾದವಾಡರವರ 'ಶಿಕ್ಷಣ ರಥ ನೀತಿ ಪಥ' ಪುಸ್ತಕವನ್ನು ಗ್ರಹಿಸಬೇಕಾಗುತ್ತದೆ. ಮಿತ್ರ ಯಾದವಾಡರವರು ತಮ್ಮ ಗ್ರಂಥದ ವಿಷಯವನ್ನು ಮಕ್ಕಳ ಮನೋಭಾವ, ಶಿಕ್ಷಣದಲ್ಲಿ ಕುಟುಂಬದ ಪಾತ್ರ, ಶಾಲೆಗಳ ಹಾಗೂ ಶಿಕ್ಷಕರ ಪಾತ್ರ, ಮಕ್ಕಳು ಕಲಿಯಬೇಕಾದ ಕೌಟುಂಬಿಕ, ಸಾಮುದಾಯಿಕ ಹಾಗೂ ಸಾಮಾಜಿಕ ಮೌಲ್ಯಗಳು, ಮೌಲ್ಯಗಳಿಲ್ಲದ ಶಿಕ್ಷಣ ಪದ್ಧತಿಯ ದುಷ್ಪರಿಣಾಮ, ವಿದ್ಯಾರ್ಥಿಗಳ ಕಲಿಕೆಯ ಪ್ರಕ್ರಿಯೆಯಲ್ಲಿ ಮೌಲ್ಯಗಳ ಪ್ರಾಮುಖ್ಯತೆ ಮುಂತಾದ ಅಂಶಗಳಾಗಿ ವಿಭಾಗಿಸಿಕೊಂಡಿರುವುದು ಸಮಂಜಸವಾಗಿದೆ.

ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ತಾಯಿ, ತಂದೆ, ಅಜ್ಜಿ, ತಾತ, ಕುಟುಂಬದ ಇತರೆ ಸದಸ್ಯರು ಮಾಡಬೇಕಾದ ಕರ್ತವ್ಯಗಳು, ಅವರ ಪಾತ್ರ, ಇನ್ನಿತರ ವಿಚಾರಗಳನ್ನು, ಉದಾಹರಣೆಗಳ ಮೂಲಕ ಹೇಳುವುದರೊಂದಿಗೆ, ತಮ್ಮ ಕೃತಿಯನ್ನು ಪ್ರಾರಂಭಿಸಿದ್ದಾರೆ. ತಾಯಿ–ತಂದೆಯರನ್ನು ಗುರುವಿನ ಸ್ಥಾನದಲ್ಲಿರಿಸಿ ನೋಡಿರುವುದು ಸರಿಯಾಗಿಯೇ ಇದೆ. ಗುರುವಿನ ಲಕ್ಷಣಗಳು, ಮಕ್ಕಳ ಜ್ಞಾನಾರ್ಜನೆಗೆ ತಾಯಿ–ತಂದೆಯರಿಂದ ಸಿಗಬೇಕಾದ ಪ್ರೋತ್ಸಾಹ, ಬೆಂಬಲ, ಪ್ರೇರಣೆ ಮಕ್ಕಳಲ್ಲಿ ಬೆಳೆಯಬೇಕಾದ ವೈಜ್ಞಾನಿಕ ಮನೋಧರ್ಮ, ಸಕಾರಾತ್ಮಕ ಚಿಂತನೆ, ಕಂದಾಚಾರ, ಮೂಢನಂಬಿಕೆಗಳ ತಿರಸ್ಕಾರ ಮುಂತಾದ ಹಲವು ಹತ್ತು ಅಂಶಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ಮಕ್ಕಳ ಶಾರೀರಿಕ, ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಯಲ್ಲಿ ತಾಯಿ–ತಂದೆಯರ ಪಾತ್ರವನ್ನು ಸೂಕ್ತವಾಗಿ ಚಿತ್ರಿಸಿದ್ದಾರೆ. ಮಕ್ಕಳಿಗೆ ತಾಯಿ–ತಂದೆಯರ ಮುಖಾಂತರ ಜಗತ್ತಿನ ಪರಿಚಯ ಆಗುತ್ತದೆಯೆಂಬ ಅವರ ಅಭಿಪ್ರಾಯ

ಸಮ್ಮತವಾದದ್ದೇ ಆಗಿದೆ. ಬಾಲ್ಯದಲ್ಲಿ ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕಾದ ಉತ್ತಮ ಅಭ್ಯಾಸಗಳು ಮತ್ತು ಮೌಲ್ಯಗಳ ಬಗ್ಗೆ ತಿಳಿಸುತ್ತಾ, ಅವುಗಳನ್ನು ತಾಯಿ, ತಂದೆ ಹಾಗೂ ಕುಟುಂಬದ ಸದಸ್ಯರು ಹೇಗೆ ತಿಳಿಸಿಕೊಡಬೇಕೆಂದು ಹೇಳಿದ್ದಾರೆ. ಸೂಕ್ತ ದೈನಂದಿನ ಉದಾಹರಣೆಯೊಂದಿಗೆ, ತಮ್ಮ ಅನುಭವದ ಮಾರ್ಗದರ್ಶನ ಮಕ್ಕಳಿಗೆ ಮಾಡಬೇಕೆಂದು ಹೇಳುತ್ತಾ ಮನೆಯಲ್ಲಿನ ಹಿರಿಯರ ಕರ್ತವ್ಯವನ್ನು ಅವರಿಗೆ ನೆನಪಿಸುತ್ತಾರೆ. ಮಕ್ಕಳು ಪರಾವಲಂಬನೆಯಿಂದ ಸ್ವಾವಲಂಬನೆಯ ಕಡೆಗೆ ಬೆಳೆದಂತೆಲ್ಲಾ, ಮಕ್ಕಳಿಗೆ, ಯುವಕ / ಯುವತಿಯರಿಗೆ, ತಮ್ಮ ಹಿಡಿತವನ್ನು ಸಡಿಲಗೊಳಿಸುತ್ತಾ ತಮ್ಮ ಪಾತ್ರವನ್ನು ಮಾರ್ಗದರ್ಶನಕ್ಕೆ ಮಾತ್ರ ಸೀಮಿತಗೊಳಿಸಬೇಕೆಂದು ತಿಳಿಸಿದ್ದಾರೆ. ಮಕ್ಕಳು ತಪ್ಪುದಾರಿಗೆ ತುಳಿಯದಂತೆ ಹಿರಿಯರು ನಿರಂತರವಾಗಿ ಅವಲೋಕಿಸುತ್ತಿರಬೇಕೆಂದು ಹೇಳಿದ್ದಾರೆ. ಹಾಗೇನೇ ಮಕ್ಕಳಲ್ಲಿ ಗಂಡು–ಹೆಣ್ಣು ಎಂಬ ಭೇದ ಬೇಡ. ಇಬ್ಬರಿಗೂ ಸಮಾನ ಅವಕಾಶ ಮತ್ತು ಸಂಪನ್ಮೂಲಗಳು ಸಿಗಲಿ ಎಂದು ಪಾಲಕರನ್ನು ಎಚ್ಚರಿಸಿದ್ದಾರೆ.

ಅನುಕರಣೆ ಮಕ್ಕಳ ಹುಟ್ಟುಗುಣ. ಮಕ್ಕಳು ನೋಡಿ ತಿಳಿಯುತ್ತವೆ. ಮಾಡಿ ಕಲಿಯುತ್ತವೆ. ಮಕ್ಕಳು ಹೇಗೆ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕೆಂದು ನೀವು ಬಯಸುತ್ತಿರೋ, ಹಾಗೆ ನೀವು ಬದುಕಿ ತೋರಿಸಿ. ಏಕೆಂದರೆ ಮಕ್ಕಳು ಕಲಿಯುವುದೇ ಅನುಕರಣೆಯಿಂದ ಎಂದು ಹಿರಿಯರಿಗೆ ಕಿವಿಮಾತು ಹೇಳುತ್ತಾರೆ. ಮಕ್ಕಳಿಗೆ ಸಂಸ್ಕಾರದ ಮಹತ್ವವನ್ನು ತಿಳಿಸುತ್ತಾ, ಅವರ ಸದ್ಗುಣಗಳನ್ನು ಪ್ರೋತ್ಸಾಹಿಸಿ ಹಾಗೂ ದುರ್ಗುಣಗಳನ್ನು ನಾಜೂಕಾಗಿ ನಿರ್ವಹಿಸಿ, ಅವುಗಳನ್ನು ಹತ್ತಿಕ್ಕಬೇಕು, ಮಕ್ಕಳನ್ನು ಬದಲಿಸಬೇಕು ಎಂದು ತಿಳಿಸುತ್ತಾರೆ. ಅದರಂತೆಯೇ ಮಕ್ಕಳನ್ನು ವಿಪರೀತ ಹೊಗಳುವುದೂ ಬೇಡ, ತೆಗಳುವುದೂ ಬೇಡ. ಹಟಮಾರಿತನ, ಆಲಸ್ಯಗಳು ಬೆಳೆದು ನಿಂತರೆ ಬದಲಿಸುವುದು ಕಷ್ಟ ಎಂಬ ಅನುಭವದ ಮಾತನ್ನು ಹೇಳಿದ್ದಾರೆ.

ಪುಸ್ತಕದ ಮುಂದಿನ ಭಾಗದಲ್ಲಿ ಮಕ್ಕಳ ಸರ್ವಾಂಗೀಣ ಅಭ್ಯುದಯದಲ್ಲಿ ಶಿಕ್ಷಣ ಸಂಸ್ಥೆಗಳು / ಶಾಲೆಗಳು ಹಾಗೂ ಶಿಕ್ಷಕರ ಪಾತ್ರವನ್ನು ಹೃದಯಂಗಮವಾಗಿ ನಿರೂಪಿಸಿದ್ದಾರೆ. ಮಕ್ಕಳಿಗೆ, ಅವರ ಶಕ್ತಿ, ಸಾಮರ್ಥ್ಯಗಳನ್ನು ಅನುಸರಿಸಿ, ಶಿಕ್ಷಣವನ್ನು ಒದಗಿಸುವುದರ ಜೊತೆಗೆ, ಸಾಮಾಜಿಕ ಹಾಗೂ ನೈತಿಕ ಶಿಕ್ಷಣಗಳ ಮಹತ್ವವನ್ನು ತಿಳಿಸುತ್ತಾ, ಆ ಕೆಲಸವನ್ನು ಶಿಕ್ಷಣ ಸಂಸ್ಥೆಗಳು ಮತ್ತು ಶಿಕ್ಷಕರು ಮಾಡಬೇಕೆಂದು ಹೇಳಿರುವುದು ಸೂಕ್ತವಾಗಿಯೇ ಇದೆ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರ–

ಪಾಲಕರ ಸಮನ್ವಯದ ಕೊರತೆಯನ್ನು ಗುರುತಿಸಿ, ಅದರಿಂದ ಮಕ್ಕಳ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿ, ಅದಕ್ಕೆ ಸೂಕ್ತ ಪರಿಹಾರವನ್ನು ಸೂಚಿಸುತ್ತಾರೆ. ಕೆಲವು ಪಾಲಕರು, ಶಿಕ್ಷಕರಿಗೆ, ಶಿಕ್ಷಣದ ಕಾರ್ಯವೈಖರಿಯ ಬಗ್ಗೆ ತಕರಾರು ಎತ್ತುವುದು, ಉಪದೇಶ ಮಾಡುವುದು ಒಳ್ಳೆಯ ಪ್ರವೃತ್ತಿಯಲ್ಲ ಎಂದು ತಿಳಿಸುತ್ತಾ, ಅವಶ್ಯವಿದ್ದರೆ ಶಾಲಾ ಅಭಿವೃದ್ಧಿಗಾಗಿ ಸಮಯೋಚಿತ ಹಾಗೂ ಸೂಕ್ತ ಸಲಹೆಗಳನ್ನು ಕೊಡುವುದು ಪಾಲಕರ ಕರ್ತವ್ಯವಾಗುತ್ತದೆ ಎಂದೂ ಹೇಳಿದ್ದಾರೆ. ಶಿಕ್ಷಕರು ತಮ್ಮ ಬೋಧನಾ ಪ್ರಕ್ರಿಯೆಗೆ ಸ್ವತಂತ್ರರಾಗಿರಬೇಕು. ಆ ರೀತಿಯ ಸ್ವಾತಂತ್ರ್ಯವನ್ನು ಶಿಕ್ಷಕರಿಗೆ ಒದಗಿಸಬೇಕೆಂದು, ಪಾಲಕರಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಸಲಹೆ ಕೊಟ್ಟಿದ್ದಾರೆ. ಗುರು–ಶಿಷ್ಯರ ನೇರಸಂಪರ್ಕ ಮತ್ತು ಭಾವನಾತ್ಮಕ ಬಾಂಧವ್ಯಗಳು ಆನ್‌ಲೈನ್ ಶಿಕ್ಷಣದಲ್ಲಿ ಸಾಧ್ಯವಾಗದು ಎಂಬ ಅವರ ಅನುಭವದ ಮಾತು ಅಕ್ಷರಶಃ ನಿಜವಾಗಿದೆ.

ಮಕ್ಕಳನ್ನು ಬೆಳೆಸುವ ಬಗೆ, ಅವರಿಗೆ ಮಾಡಬೇಕಾದ ಸಕಾಲಿಕ ಮತ್ತು ಸೂಕ್ತ ಮಾರ್ಗದರ್ಶನ, ಸೂಕ್ತ ಮಾರ್ಗದರ್ಶನ ಸಿಗದಿದ್ದರೆ ಆಗುವ ಕೆಟ್ಟ ಪರಿಣಾಮ, ಪಾಲಕರ ಮುಂಜಾಗ್ರತೆ, ಕರ್ತವ್ಯ ಇತ್ಯಾದಿ ವಿಚಾರಗಳನ್ನು, ಬೇವು ಬಿತ್ತಿ ಮಾವು ಬೆಳೆಯಲಾಗದು ಎಂಬ ಉಪಮೆಯೊಂದಿಗೆ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಪಾಲಕರು ಜಾಗ್ರತೆಯಿಂದ ಇರಲು ಸೂಚಿಸಿದ್ದಾರೆ.

ಶಿಸ್ತು ಹಾಗೂ ಸಂಯಮ ಎಂಬ ಭಾಗದಲ್ಲಿ, ಪಾಲಕ–ಬಾಲಕ–ಶಿಕ್ಷಕರ ಕರ್ತವ್ಯ ಹಾಗೂ ಪಾತ್ರಗಳ ಬಗ್ಗೆ ತಿಳಿಸಿದ್ದಾರೆ. ಬಾಲಕ/ಕಿ ಶಿಕ್ಷಣವನ್ನು ಶಿಸ್ತಿನಿಂದ ಹಾಗೂ ಪ್ರೀತಿಯಿಂದ ಕಲಿಯಬೇಕು. ಪಾಲಕರು ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವಲ್ಲಿ ಪ್ರಾಮಾಣಿಕತೆಯನ್ನು ಮೆರೆಯಬೇಕು. ಅಂತೆಯೇ ಶಿಕ್ಷಕರು ವಿದ್ಯಾದಾನವನ್ನು ಸಕಾಲಿಕವಾಗಿ ಹಾಗೂ ಸೂಕ್ತವಾಗಿ, ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಮಾಡಬೇಕು. ಈ ಮೂರು ಜನ ತಮ್ಮ ತಮ್ಮ ಪಾತ್ರವನ್ನು ನಿರಂತರವಾಗಿ ನಿರ್ವಹಿಸಿದರೆ ಫಲಿತಾಂಶ ನಿಶ್ಚಯವಾಗಿಯೂ ಉತ್ತಮವಾಗಿರುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಪ್ರಾಕೃತಿಕವಾಗಿ, ಸಮಯಕ್ಕೆ ಸರಿಯಾಗಿ ಕೆಲಸಕಾರ್ಯಗಳನ್ನು ಮಾಡುವುದೇ ಶಿಸ್ತು ಎಂಬ ಸರಳ ಶಿಸ್ತಿನ ವ್ಯಾಖ್ಯೆಯನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಶಿಸ್ತು ಹಾಗೂ ಸಂಯಮಗಳಿಂದ ವಿದ್ಯಾರ್ಥಿ ಏನು ಬೇಕಾದರೂ ಸಾಧಿಸಬಹುದೆಂದು ಹೇಳಿರುವುದು ಸರಿಯಾಗಿಯೇ ಇದೆ.

ಮಕ್ಕಳ ದೈಹಿಕ, ಮಾನಸಿಕ, ಬೌದ್ಧಿಕ, ನೈತಿಕ ಮತ್ತು ಭಾವನಾತ್ಮಕ ಬೆಳವಣಿಗೆಯಲ್ಲಿ ಪೌಷ್ಟಿಕ ಆಹಾರದ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಹಾಗೇನೇ ಮಕ್ಕಳ ಸರ್ವತೋಮುಖ ಅಭ್ಯುದಯಕ್ಕೆ ದೇಶಭಕ್ತಿ, ಕಷ್ಟ ಸಹಿಷ್ಣುತೆ, ಪರೋಪಕಾರ, ಸಹಯೋಗ, ಸಹಬಾಳ್ವೆ, ನಾಗರೀಕ ಪ್ರಜ್ಞೆ, ನಾಯಕತ್ವ ಗುಣ ಇತ್ಯಾದಿ ಮೌಲ್ಯಗಳ ಅಗತ್ಯತೆಯನ್ನು ಮನಗಂಡು, ಪಾಲಕರು ಅವುಗಳನ್ನು ಮಕ್ಕಳು ಅನುಸರಿಸುವಂತೆ ಪ್ರಾಮಾಣಿಕವಾಗಿ ಹಾಗೂ ನಿರಂತರವಾಗಿ ಪ್ರಯತ್ನ ಪಡುವುದನ್ನು ಮರಳಿ ಮರಳಿ ನೆನಪಿಸುತ್ತಾರೆ.

ಸಂಸ್ಕಾರದ ಬಗ್ಗೆ ಮಾತನಾಡುತ್ತಾ, ಉತ್ತಮ ವಾತಾವರಣದಲ್ಲಿ ಮಕ್ಕಳನ್ನು ಬೆಳೆಸಬೇಕು, ಅವರ ಚಟುವಟಿಕೆಗಳ ಮೇಲೆ ನಿಗ ಇಡಬೇಕು. ಕಾಲಕಾಲಕ್ಕೆ ಅವರಿಗೆ ಸೂಕ್ತ ಮಾರ್ಗದರ್ಶನ ಮಾಡಬೇಕು. ಮಾರ್ಗದರ್ಶನ ಪ್ರಕ್ರಿಯೆಯಲ್ಲಿ ಪ್ರೀತಿಯೂ ಇರಬೇಕು, ಎಚ್ಚರಿಕೆಯ ಧ್ವನಿಯೂ ಇರಬೇಕು. ಮಕ್ಕಳಿಗೆ ಸಮಸ್ಯೆ ಬಂದಾಗ ಪರ್ಯಾಯ ಮಾರ್ಗಗಳ ಪರಿಚಯ ಮಾಡಿಕೊಡಬೇಕು, ಎಂಬಿತ್ಯಾದಿ ಅವರ ಮಾತುಗಳು ಅವರ ಅನುಭವದ ಮೂಸೆಯಿಂದ ಬಂದ ನುಡಿಗಳಾಗಿವೆ.

ಹೋಲಿಕೆ ಮಾಡಿದರೆ, ಹೀಯಾಳಿಸಿದರೆ ಮಗುವಿನ ಮೇಲೆ ಆಗುವ ಕೆಟ್ಟ ಪರಿಣಾಮಗಳ ಬಗ್ಗೆ ಪಾಲಕರನ್ನು ಎಚ್ಚರಿಸಿದ್ದಾರೆ. ಪಾಲಕರು ಮಾಡಬೇಕಾದ ಕರ್ತವ್ಯಗಳ ಬಗ್ಗೆ ಮಾರ್ಗದರ್ಶನ ಮಾಡಿದ್ದಾರೆ. ಪ್ರೇರಣೆ–ಪ್ರೋತ್ಸಾಹದ ಮಾತುಗಳು ಪವಾಡಗಳನ್ನೇ ಮಾಡುತ್ತವೆ. ನಮ್ಮ ಅನುಭವವೂ ಇದೇ ಆಗಿದೆ.

ಲೇಖಕರು ಪ್ರತಿಯೊಂದು ಅಧ್ಯಾಯದಲ್ಲಿಯೂ, ಶಿಕ್ಷಣದ ಒಂದೊಂದು ಆಯಾಮವನ್ನು ಕೈಗೆತ್ತಿಕೊಂಡು, ಅದರ ಮಜಲುಗಳನ್ನು ಪರಿಚಯ ಮಾಡುವುದರೊಂದಿಗೆ, ಮುಂದೆ ಮಾಡಬೇಕಾದ ಕೆಲಸಗಳ ಬಗ್ಗೆ, ನಡೆಯಬೇಕಾದ ದಾರಿಯ ಬಗ್ಗೆ ಸ್ಪಷ್ಟವಾಗಿ ಮಾರ್ಗದರ್ಶನ ಮಾಡಿದ್ದಾರೆ. ಉತ್ತಮ ಶಿಕ್ಷಕರಾದ ಮತ್ತು ಅಪಾರವಾದ ಅನುಭವ ಹೊಂದಿರುವ ಸುಸಂಸ್ಕೃತ ವ್ಯಕ್ತಿತಯಿಂದ ಮಾತ್ರ ಇದು ಸಾಧ್ಯ.

ಲೇಖಕರು ಈ ಕೃತಿಗೆ ಅವಶ್ಯಕವಾಗುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ತಮ್ಮ ಚಿಂತನೆ–ಅನುಭವಗಳನ್ನು ಕ್ರೋಡೀಕರಿಸಿ ಕೃತಿಯನ್ನು ತುಂಬಾ ಅರ್ಥಪೂರ್ಣವಾಗಿ ಬರೆದಿದ್ದಾರೆ. ಲೇಖಕರು ಬಳಸಿರುವ ಭಾಷೆ ಅಪ್ಯಾಯಮಾನವಾಗಿದೆ. ನಿರೂಪಣೆ

ಸಮಂಜಸವಾಗಿದೆ. ತಮ್ಮ ಜ್ಞಾನ ಮತ್ತು ಅನುಭವವನ್ನು ಈ ಪುಸ್ತಕದಲ್ಲಿ ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಕೃತಿಯ ಉದ್ದಕ್ಕೂ ಗಾದೆ ಮಾತುಗಳು ಹಾಗೂ ನುಡಿಗಟ್ಟುಗಳನ್ನು ಬಹಳ ಸಮಂಜಸವಾಗಿ ಬಳಸಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯ ಉನ್ನತಿಗೆ ಅವಶ್ಯಕವಾಗುವ ವೈಯಕ್ತಿಕ, ಕೌಟುಂಬಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಕೃತಿಯ ಉದ್ದಕ್ಕೂ ನಿರಂತರವಾಗಿ ಎತ್ತಿಹಿಡಿದಿರುವುದು ಈ ಪುಸ್ತಕದ ವಿಶೇಷ ಗುಣಗಳಲ್ಲಿ ಒಂದಾಗಿದೆ. ಒಟ್ಟಿನಲ್ಲಿ ಕೃತಿಯು ಸಮಂಜಸವಾಗಿದೆ ಹಾಗೂ ಸಕಾಲಿಕವಾಗಿದೆ. ತಮ್ಮ ಈ ಪುಸ್ತಕವನ್ನು ಓದಿ, ನನ್ನ ಅನಿಸಿಕೆಗಳನ್ನು ದಾಖಲಿಸಲು ಅವಕಾಶ ಮಾಡಿಕೊಟ್ಟ ಶ್ರೀ ಯಾದವಾಡರವರಿಗೆ ನಾನು ಕೃತಜ್ಞನಾಗಿದ್ದೇನೆ. ಶ್ರೀಯುತರಿಂದ ಬದುಕಿನ ವಿವಿಧ ಆಯಾಮಗಳನ್ನು ಪರಿಚಯಿಸುವ ಕೃತಿಗಳು ಮುಂದಿನ ದಿನಗಳಲ್ಲಿ ಬರಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

18–10–2021
ಸಂಡೂರು

ಸಿ.ಆರ್. ಗೋಪಾಲ್
ಈಶಾವಾಸ್ಯ, 198, ಅಗ್ನಿಶಾಮಕ
ಠಾಣೆ ಎದುರು, ಕೂಡ್ಲಿಗಿ ರಸ್ತೆ,
ಸಂಡೂರು, ಬಳ್ಳಾರಿ ಜಿಲ್ಲೆ–583119.

ಲೇಖಕರ ಲೇಖನಿಯಿಂದ

ಶಿಕ್ಷಣದ ರಥವು ನೀತಿ ಪಥದ ಮೇಲೆ ಚಲಿಸಬೇಕು ಹಾಗೂ ಪಾಲಕರೆ ಮಕ್ಕಳಿಗೆ ದಾರಿದೀಪವಾಗಬೇಕು. ಮಕ್ಕಳು ಕೇವಲ ಶಿಕ್ಷಿತರಾದರೆ ಸಾಲದು, ಸುಶಿಕ್ಷಿತರಾಗಬೇಕು. ಸಭ್ಯ ಸಂಸ್ಕೃತಿಯ ನೀತಿ ಶಿಕ್ಷಣ ಅವರಿಗೆ ಸಿಗಬೇಕು. ಮಕ್ಕಳನ್ನು ಶಾಲೆಗೆ ಕಳುಹಿಸಿದರಾಯಿತು, ಅಲ್ಲಿ ಅವರು ಎಲ್ಲವನ್ನೂ ಕಲಿತುಕೊಂಡು ಬರುತ್ತಾರೆ ಎಂಬ ಭ್ರಮಾ ಲೋಕದಿಂದ ಪಾಲಕರು ಹೊರಗೆ ಬರಬೇಕು. ಮಕ್ಕಳ ಶಾರೀರಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ, ನೈತಿಕ, ಸಾಮಾಜಿಕ ಹಾಗೂ ಸೌಂದರ್ಯಾತ್ಮಕ, ಒಟ್ಟಾರೆ ಸರ್ವಾಂಗೀಣ ಮೌಲಿಕ ಶಿಕ್ಷಣವನ್ನು ಮಗುವು ಪಡೆದುಕೊಳ್ಳಬೇಕು. ಸಮಾಜದ ಮೂಲ ಘಟಕ ಹಾಗೂ ಮಗುವಿನ ಮೊದಲ ಪಾಠ ಶಾಲೆಯಾದ ಕುಟುಂಬದಿಂದಲೆ ಮಗುವು ಪ್ರೀತಿ, ಪ್ರೇಮ, ಸ್ನೇಹ, ಮಮತೆ, ಮಮಕಾರ ಹಾಗೂ ವಾತ್ಸಲ್ಯಗಳನ್ನು ಪಡೆದುಕೊಳ್ಳುತ್ತ ಬೆಳೆಯುತ್ತದೆ. ಶಿಸ್ತು, ಸಂಯಮ, ಶಾಂತಚಿತ್ತತೆ, ಸಹ ಜೀವನ ಹಾಗೂ ಸಹಕಾರದಂತಹ ಸದ್ಗುಣ ಸಂಪನ್ನತೆಗಳು ಮಕ್ಕಳಲ್ಲಿ ಜಾಗೃತಗೊಳ್ಳಲು ಪೂರಕವಾದ ವಾತಾವರಣ ಮನೆಯಲ್ಲಿರಬೇಕು. ಕುಟುಂಬದಲ್ಲಿ ಕಲಿತ ಮೌಲ್ಯಗಳೇ ಮುಂದೆ ವಿದ್ಯಾಧ್ಯಯನ ಮಾಡುವ ಶಿಕ್ಷಣ ಸಂಸ್ಥೆಗಳಲ್ಲಿ ಇನ್ನಷ್ಟು ದೃಢವಾಗುತ್ತವೆ. ಮೌಲ್ಯಾಧಾರಿತ ಶಿಕ್ಷಣ ಪಡೆದುಕೊಳ್ಳಲು ಪಾಲಕರು ಮಕ್ಕಳನ್ನು ಪ್ರೋತ್ಸಾಹಿಸಬೇಕು. ಅದರಿಂದ ಸುಂದರ ಸಮಾಜ ನಿರ್ಮಾಣವಾಗಲು ವೇದಿಕೆ ಸಿದ್ಧವಾಗುವುದು.

"ಸಾಹಿತ್ಯ ಸಮಾಜದ ಕನ್ನಡಿ", ಶಿಕ್ಷಣ, ಕಲಿಕೆ ಹಾಗೂ ಪ್ರಗತಿಗಳು ಮಾನವ ಇತಿಹಾಸದ ನಿರಂತರ ಪ್ರಕ್ರಿಯೆ. ನಿಂತ ನೀರು ಕೊಳಚೆಯಾದರೆ ನಿರಂತರವಾಗಿ ಹರಿಯುವುದು ಪವಿತ್ರಗಂಗೆಯಾಗುತ್ತದೆ. ಸಾವಿರ–ಸಾವಿರ ವರ್ಷಗಳಿಂದ ಮನುಷ್ಯ ಕಲಿಯುತ್ತ–ಕಲಿಸುತ್ತ ಬಂದಿರುವುದು ಪ್ರಗತಿಯ ಸಂಕೇತವೆನ್ನಿಸಿದರೂ ಈ ಸಂಕೇತ ನೈತಿಕ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಬಂದಿದೆಯೆ ಎಂದು

ಸಿಂಹಾವಲೋಕನ ಮಾಡಬೇಕು. ಈ ಪುನೀತ ಕಾರ್ಯದಲ್ಲಿ ಶಿಕ್ಷಕರೊಂದಿಗೆ ಪಾಲಕರೂ ಕೈಜೋಡಿಸಬೇಕು. ನೀತಿ ಶಿಕ್ಷಣವೆಂಬ ಪಾವನ ಗಂಗೆಯಲ್ಲಿ ಮಿಂದ ಮಾನವ ಸಮಾಜ ಭಾವೀ ಭವಿಷತ್ತಿನ ಪೀಳಿಗೆಗೆ ಮಾದರಿಯಾಗಬೇಕೆಂಬುದೇ ಈ ಕಿರು ಹೊತ್ತಿಗೆಯ ಸಾರ.

ಹಸನ್ಮುಖಿ ಸದಾ ಸುಖಿ. ಹಿರಿಕಿರಿಯರೆಲ್ಲರೊಂದಿಗೂ ನಗುನಗುತ ಬೆರೆತು ತಮ್ಮ ಅಗಾಧವಾದ ಶೈಕ್ಷಣಿಕ ಅನುಭವವನ್ನು ಹಂಚುತ್ತ ಸಾವಿರ–ಸಾವಿರ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಹೆಸರು ಮಾಡಿದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಶ್ರೀಮತಿ ಮೀನಾ ಚಂದಾವರಕರ ಅವರು ಈ ಕಿರು ಹೊತ್ತಿಗೆಗೆ ಮುನ್ನುಡಿ ಬರೆದು ಮಹದುಪಕಾರ ಮಾಡಿದ್ದಾರೆ. ಅವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.

ನನಗೆ ಶೈಕ್ಷಣಿಕ ತಿಳುವಳಿಕೆ ಬಂದಾಗಿನಿಂದ ತಮ್ಮ ಅಮೂಲ್ಯ ಸಲಹೆ, ಪ್ರೋತ್ಸಾಹ ಹಾಗೂ ಪ್ರೇರಣೆ ನೀಡುತ್ತ ಬಂದಿರುವ ಆತ್ಮೀಯ ಬಂಧು ಶ್ರೀ ಎಸ್.ಜಿ. ಕೋಟಿಯವರು ನನಗೆ ಶೈಕ್ಷಣಿಕ ಗುರುವು ಹಾಗೂ ನನ್ನ ಸಾಹಿತ್ಯ ಚಟುವಟಿಕೆಗಳಿಗೆ ಚೇತನದ ಚಿಲುಮೆಯೂ ಹೌದು. ಶಿಕ್ಷಣ ಕ್ಷೇತ್ರದಲ್ಲಿ ಹಲವು ಹುದ್ದೆಗಳಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿ ಪ್ರಾಮಾಣಿಕ ಅಧಿಕಾರಿ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಈ ಕಿರು ಹೊತ್ತಿಗೆ ಶಿಕ್ಷಣದ ಪರಿಧಿಯನ್ನೇ ಒಳಗೊಂಡಿರುವುದರಿಂದ ಬೆನ್ನುಡಿ ಬರೆದು ಮುನ್ನಡೆಯಲು ಹುರಿದುಂಬಿಸಿದುದಕ್ಕೆ ಶ್ರೀಯುತರಿಗೆ ತುಂಬು ಹೃದಯದ ಅಭಿನಂದನೆಗಳು.

ಸಮಾಜ ಸೇವಾ ಕಾರ್ಯ, ಶಿಕ್ಷಣ, ನೀತಿ ಶಿಕ್ಷಣ ಹಾಗೂ ಪ್ರಶಿಕ್ಷಣಗಳ ಮುಖಾಂತರ ನಿರುತ ಪಬ್ಲಿಕೇಷನ್ಸ್ ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಹಗಲಿರುಳು ಶ್ರಮಿಸುತ್ತಿದೆ. ಎಂ.ಎಚ್.ರಮೇಶ ನಿಜ ಕಾಳಜಿಯೊಂದಿಗೆ ಪ್ರಕಾಶನ ಕ್ಷೇತ್ರದಲ್ಲಿ ದಿಟ್ಟ ಹೆಜ್ಜೆಯೊಂದಿಗೆ ಮುನ್ನಡೆಯುತ್ತಿದ್ದಾರೆ. ಅವರ ಪ್ರಕಾಶನದಿಂದ ಇದು ನನ್ನ ಎರಡನೆಯ ಕೃತಿ. ಈ ಕಿರು ಹೊತ್ತಿಗೆಯನ್ನು ಅಂದವಾಗಿ ಮುದ್ರಿಸಿ ಲೋಕಾರ್ಪಣೆ ಮಾಡುವುದಕ್ಕೆ ದೊಡ್ಡ ಮನಸ್ಸು ಮಾಡಿದ್ದಾರೆ. ಯುವ ಹಾಗೂ ಉತ್ಸಾಹಿ ಪ್ರಕಾಶಕ ಎಂ.ಎಚ್. ರಮೇಶ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

"ಇಂದಿನ ಬಾಲಕ ನಾಳಿನ ನಾಡಿನ ನಾಗರಿಕ" ಬೆಳೆಯ ಸಿರಿಯನ್ನು ಮೊಳಕೆಯಲ್ಲಿಯೇ ಪೋಷಿಸಿ ಮೇಲು ಗೊಬ್ಬರ ಹಾಕಿ ಬೆಳೆಸುವ ಕೆಲಸ ಪಾಲಕರಿಂದಾಗಬೇಕು. ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯದಲ್ಲಿ ಪಾಲಕರ ಪಾತ್ರ ಹಿರಿದು. ಶಾರೀರಿಕ, ಮಾನಸಿಕ ಹಾಗೂ ಸಾಮಾಜಿಕ ಸುಸ್ಥಿತಿಯೇ ಮನುಷ್ಯನ ಸಂಪೂರ್ಣ ಆರೋಗ್ಯವೇ ವಿನಹ ಕಾಯಿಲೆ ಇಲ್ಲದ ದುರ್ಬಲವಲ್ಲದ ಶರೀರ ಹೊಂದಿರುವುದು ಆರೋಗ್ಯವಲ್ಲವೆಂಬ ವಿಷಯವನ್ನು ಕೇಂದ್ರವಾಗಿರಿಸಿಕೊಂಡು "ಶಿಕ್ಷಣ ರಥ ನೀತಿ ಪಥ" ಕಿರು ಹೊತ್ತಿಗೆಯನ್ನು ಸಾರಸ್ವತ ಲೋಕಕ್ಕೆ ಸಮರ್ಪಿಸುತ್ತಿರುವೆ. ಪಾಲಕರ ಹೃನ್ಮನಗಳಲ್ಲಿ ಚೇತರಿಕೆ ಮೂಡಿಸುವಲ್ಲಿ ಈ ಕೃತಿ ಸಹಕಾರಿಯಾದೀತೆಂಬ ಬಲವಾದ ನಂಬುಗೆ ನನ್ನದು.

– ಎಚ್.ಎನ್. ಯಾದವಾಡ

ಪರಿವಿಡಿ

1.	ಮನೆಯೇ ಮೊದಲ ಪಾಠಶಾಲೆ	– 17
2.	ಅನುಕರಣೆ ಮಕ್ಕಳ ಹುಟ್ಟು ಗುಣ	– 30
3.	ಶಾಲೆಯೊಂದಿಗೆ ಸಮನ್ವಯ	– 45
4.	ಬೇವು ಬಿತ್ತಿ ಮಾವು ಬೆಳೆಯಲಾಗದು	– 52
5.	ಶಿಸ್ತು ಹಾಗೂ ಸಂಯಮ	– 63
6.	ಶಿಕ್ಷಣ ರಥ ನೀತಿ ಪಥ	– 80
7.	ಹೋಲಿಕೆ ಮಾಡುವುದು ಬೇಡ	– 96
8.	ಸಕಾರಾತ್ಮಕ ಭಾವನೆ ಇರಲಿ	– 108
9.	ಭಾಗ್ಯವಂತರಾಗಲಿ ಮಕ್ಕಳು	– 115
10.	ಮೃದು ವಚನದ ಸಂಸ್ಕಾರವಿರಲಿ	– 125

ಈ ಪುಸ್ತಕದ ಆಯ್ದ ಕೆಲವೇ ಕೆಲವು ಪುಟಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.
ಸಂಪೂರ್ಣ ಪುಸ್ತಕಕ್ಕಾಗಿ ಸಂಪರ್ಕಿಸಿ:

ನಿರುತ ಪಬ್ಲಿಕೇಷನ್ಸ್

#326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,
ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,
ಬೆಂಗಳೂರು-560056. ದೂ: 080-23213710, 8073067542

ಇಮೇಲ್: nirutapublications@gmail.com

www.nirutapublications.org

ಮನೆಯೇ ಮೊದಲ ಪಾಠಶಾಲೆ

"ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು", ಮಗುವೊಂದು ಪ್ರಪಂಚಕ್ಕೆ ಆಗಮಿಸಿದಾಗ ಅದರ ಲಾಲನೆ–ಪಾಲನೆಯ ಜವಾಬ್ದಾರಿ ಪ್ರಕೃತಿದತ್ತವಾಗಿ ತಾಯಿಗೆ ಸೇರುತ್ತದೆ. ಮಗುವಿನ ಶಾರೀರಿಕ ಬೆಳವಣಿಗೆಗೆ ತುತ್ತು ಮಾಡಿ ಊಟ ಮಾಡಿಸುವ ತಾಯಿ, ಮಗುವಿನ ಮಾನಸಿಕ ಬೆಳವಣಿಗೆಗೆ ತನ್ನ ಮಾತು ಹಾಗೂ ಹಾವಭಾವಗಳ ಮುಖಾಂತರ ಜಗದ ಅರಿವು ಮೂಡಿಸಲು ಪ್ರಕೃತಿಯ ಸೊಬಗು ಹಾಗೂ ಋತುಮಾನಗಳ ಪರಿಚಯ ಮಾಡಿಸುತ್ತ ಸಾಗುತ್ತಾಳೆ. ಜೀವ ಜಗತ್ತಿನಲ್ಲಿ ಅತ್ಯಂತ ಪ್ರೀತ್ಯಾದರಗಳ ಅಗ್ರಸ್ಥಾನದಲ್ಲಿರುವ ತಾಯಿ ಮಗುವಿಗೆ ನೀಡುವ ತರಬೇತಿ ಅತ್ಯಮೂಲ್ಯವಾದುದು. ನವ ರಸಗಳಲ್ಲಿ ವಿಶೇಷ ಸ್ಥಾನ ಪಡೆದಿರುವ ವಾತ್ಸಲ್ಯ ರಸ ಕೇವಲ ತಾಯಿ ಹಾಗೂ ಮಗುವಿಗೆ ಸೀಮಿತ. ಈ ರಸದೌತಣದ ಮುಖೇನ ಅಸಾಧ್ಯವಾದುದನ್ನು ಸಾಧ್ಯ ಮಾಡುವ ಅತ್ಯದ್ಭುತ ಶಕ್ತಿ ಮಾತೃ ವಾತ್ಸಲ್ಯಕ್ಕಿದೆ. ಭಾವೀ ಭವಿಷತ್ತಿನ ನಾಗರೀಕನಾಗಿ ರೂಪಗೊಳ್ಳುವ ಮಗುವು ತಾಯಿಯ ಮಡಲಿನಿಂದ ತನ್ನ ತಾಲೀಮು ಆರಂಭಿಸುತ್ತದೆ.

ಭವನವೊಂದು ಸುಂದರವಾಗಿ ರೂಪಗೊಳ್ಳುವುದರ ಜೊತೆಗೆ ಹಲವು ಕಾಲ ಬಾಳಿಕೆ ಬರಲು ಅದರ ಅಡಿಪಾಯವೇ ಕಾರಣ. ಅದರ ಸೌಂದರ್ಯ ಹಾಗೂ ಬಾಳಿಕೆಗಳು ಸಮ್ಮಿಳಿತವಾಗಲು ಅಭಿಯಂತ ಅದರ ನೀಲನಕ್ಷೆ ಸಿದ್ಧಪಡಿಸಿ ಭವನವನ್ನು ಕಟ್ಟಿ ಲೋಕಾರ್ಪಣೆ ಮಾಡುತ್ತಾನೆ. ಇನ್ನು ಮನುಷ್ಯನ ಜೀವನದ ನೀಲನಕ್ಷೆಯು ತಾಯಿಯಿಂದ ರಚಿಸಲ್ಪಡುತ್ತದೆ. ಕಟ್ಟಡಕ್ಕೆ ಅಡಿಪಾಯ ಹೇಗೆ ಪ್ರಮುಖವೋ ಹಾಗೆಯೇ ಮನುಷ್ಯನಿಗೆ ಬಾಲ್ಯವೂ ಅಷ್ಟೆ ಪ್ರಮುಖವಾದುದು. ಈ ಅಡಿಪಾಯವೇ ಸಂಸ್ಕಾರ ಎಂದು ಕರೆಸಿಕೊಳ್ಳುತ್ತದೆ. ಹುಟ್ಟಿನಿಂದ ಏನನ್ನೂ ಬರಿಯದ ಕರಿ ಹಲಗೆಯಂತಹ ಮಗುವಿನ ಮನಃಪಟಲದಲ್ಲಿ ತಾಯಿಯ ಮುಖಾಂತರ ಸೂಕ್ಷ್ಮವಾದ ಬರಹ ಬರೆಯುತ್ತ ಸಾಗುತ್ತದೆ. ಜೀವ ಜಗದ

ಪ್ರಥಮ ಶಿಕ್ಷಕಿಯ ಸ್ಥಾನದಲ್ಲಿರುವ ತಾಯಿ ಸತ್ಯ, ಧರ್ಮ, ಪರೋಪಕಾರ, ಸಹಿಷ್ಣುತೆ ಶಿಸ್ತು ಹಾಗೂ ಸಂಯಮಗಳ ಬೀಜಗಳನ್ನು ಬಿತ್ತುತ್ತ ಸಾಗುವ ಕೃಷಿಕಳು. ಸಕಾರಾತ್ಮಕ ಭಾವನೆಗಳನ್ನು ಬೆಳೆಸುತ್ತ ನಕಾರಾತ್ಮಕ ಕಳೆಗಳನ್ನು ಕಿತ್ತೊಗೆಯುವ ಸಾಹಸ ಕಾರ್ಯ ತಾಯಿಯಿಂದ ಆಗಬೇಕು.

ಜಗತ್ತಿಗೆ ಆಗಮಿಸಿದ ಹೊಸ ಅತಿಥಿ ವೈವಿದ್ಯಮಯ ಸೌಂದರ್ಯವನ್ನು ಹೊಂದಿದ ಪ್ರಕೃತಿಯನ್ನು ನೋಡಿ ಕುತೂಹಲದಿಂದ ನೋಡುತ್ತ ಸಾಗುವ ಮಗುವಿಗೆ ತಾಯಿ ಮಾಗದರ್ಶಿ. ನೋಡುತ್ತ–ಆಡುತ್ತ ತಾಯಿಯ ಬೆರಳ ತುದಿ ಹಿಡಿದು ತೆಪ್ಪೆ ಹೆಜ್ಜೆಯನ್ನಿಡುತ ಸಾಗುವ ಮಗುವಿಗೆ ಎಲ್ಲವೂ ಹೊಸದು, ಎಲ್ಲರೂ ಹೊಸಬರು. ಪ್ರಪಂಚದ ಚರಾಚರಗಳನ್ನು ನೋಡಿ ವಿಸ್ಮಯ ಹಾಗೂ ಕುತೂಹಲದಿಂದ ಬೆರಗುಗಣ್ಣಿನಿಂದ ನೋಡುತ್ತದೆ. ಅವುಗಳ ಕುರಿತು ಅರಿತುಕೊಳ್ಳುವ ತವಕ ಅದಕ್ಕೆ. ಇದೇನಿದು? ಯಾರಿವರು? ಇದೇಕೆ ಹೀಗೆ? ಹೀಗೆಯೇ ಮಗುವಿನ ಮನಃ ಪಟಲದ ಮೇಲೆ ಮೂಡುವ ಸವಾಲುಗಳಿಗೆ ಜವಾಬು ಅಪೇಕ್ಷಿಸುವ ಮಗು ತಾಯಿಯ ಮುಖ ನೋಡುತ್ತದೆ. ಉತ್ತರ ಸಿಕ್ಕೀತು ಎಂಬ ಭರವಸೆ ಆ ಮಗುವಿಗೆ. ಬೆಳವಣಿಗೆಯ ಹಂತದಲ್ಲಿ ಮಗುವಿನ ಸಹಾಯಕ್ಕೆ ಬರುವ ತೊದಲ್ನುಡಿಯು ತಾಯಿ ಹಾಗೂ ಮಗುವಿನ ಮಧ್ಯೆ ಸಂಪರ್ಕದ ಕೊಂಡಿಯಾಗಿ ಕೆಲಸ ಮಾಡುತ್ತದೆ. ತನ್ನ ಮೊದಲ ಗುರುವು ತಾಯಿಯಿಂದ ಕೇಳಿ ತಿಳಿಯಬಯಸುತ್ತದೆ. ಸಾಮಾನ್ಯ ಪ್ರಶ್ನೆಗಳೇನೋ ಸರಿ, ಹಲವು ಬಾರಿ ಕೇಳಿ ಬರುವ ಅಸಾಮಾನ್ಯ ಪ್ರಶ್ನೆಗಳಿಗೆ ಉತ್ತರ ಸಿಗದೆ ತಡಕಾಡಬೇಕಾಗಿ ಬರುವುದುಂಟು. ಪ್ರಶ್ನೆಗಳು ವಿಚಿತ್ರವೆನ್ನಿಸಿದಾಗ ತಾಯಿಗೆ ಬರುವ ಸನ್ನಿವೇಶಗಳಿಗೇನೂ ಕೊರತೆ ಇಲ್ಲ. ಮಗುವಿನ ಮೊದಲ ಗುರುವಿನ ಸ್ಥಾನದಲ್ಲಿರುವ ತಾಯಿ ಇಲ್ಲಿ ತನ್ನ ಸಹನಶೀಲತೆಯ ಪರಿಚಯ ಕೊಡಬೇಕಾಗುತ್ತದೆ. ಇಲ್ಲಿ ಸಿಟ್ಟು ಕೋಪಗಳು ಸುತಾರಾಂ ಬೇಡ.

ಪ್ರಶ್ನೆಗಳನ್ನು ಮಗು ಏಕೆ ಕೇಳುತ್ತದೆ? ಎಂದು ತಾಯಿಯಾದವಳು ಒಂದು ಕ್ಷಣ ತನ್ನನ್ನೇ ತಾನು ಕೇಳಿಕೊಳ್ಳಬೇಕು. ಮೊದಲನೆಯದಾಗಿ ಆ ಪ್ರಶ್ನೆಗೆ ಉತ್ತರ ಮಗುವಿಗೆ ತಿಳಿದಿದ್ದರೆ. ತಾಯಿಯನ್ನೇಕೆ ಕೇಳುತ್ತಿತ್ತು? ಗೊತ್ತಿಲ್ಲದೇ ಇದ್ದುದರಿಂದಲೇ ಕೇಳುತ್ತಿದೆ. ಇಲ್ಲಿ ಉದಾಹರಣೆಗೊಂದು ಪ್ರಸಂಗ. ಅಪರಿಚಿತ ಊರಿಗೆ ನಿಮ್ಮ

ಪ್ರಯಾಣ. ಕಾರ್ಯಕ್ರಮವೊಂದಕ್ಕೆ ನಿಮ್ಮನ್ನು ಆಹ್ವಾನಿಸಲಾಗಿದೆ. ಊರು ಸೇರಿದ ಮೇಲೆ ಕಾರ್ಯಕ್ರಮ ಆಯೋಜನೆಯ ಸ್ಥಳಕ್ಕೆ ನೀವು ಹೇಗೆ ತಲುಪುತ್ತೀರಿ? ಆ ಊರಿಗೆ ನೀವು ಹೊಸಬರು. ಅನಾಯಾಸವಾಗಿ ದಾರಿ ಹೋಕರನ್ನು ಕೇಳಿ ದಾರಿ ಕೇಳಿ ಕಾರ್ಯಕ್ರಮ ಆಯೋಜನೆಯಾದ ಸ್ಥಳ ತಲುಪುತ್ತೀರಿ. ಇಲ್ಲಿಯೂ ಮಗುವು ಜೀವ ಜಗತ್ತಿಗೆ ಹೊಸ ಅತಿಥಿ ಹಾಗೂ ನೀವು ಮಾರ್ಗದರ್ಶಕರು. ಹೀಗಿರುವಾಗ ಕೇಳಿ ತಿಳಿಯುವ ಉತ್ಸಾಹದಲ್ಲಿರುವ ಹಾಗೂ ಬಹುಮುಖ್ಯವಾಗಿ ನಿಮ್ಮನ್ನೇ ನಂಬಿರುವ ಮಗುವಿಗೆ ನೀವು ಉತ್ತರಿಸುವ ಬದಲಾಗಿ "ಏ ತಲೆ ಹರಟೆ, ನನ್‌ತಲೆ ತಿನ್ಮೇಡಾ ತೆಪ್ಪಗೆ ಕುತ್ಕೋತೀಯೋ ಇಲ್ಲ ಎರಡು ಬಾರಿಸ್ಲಾ"? ಹೀಗೆಲ್ಲ ಗದರಿಸುವುದೆಷ್ಟು ಸರಿ? "ಪರ ಊರು ಪ್ರಾಣ ಸಂಕಟ" ಅನ್ನೋ ಹಾಗೆ ದಾರಿ ಸಿಗದ ಪಯಣಿಗರಾದ ನೀವು "ಅಯ್ಯ.. ಈ ವಿಳಾಸಕ್ಕೆ ಹ್ಯಾಗೆ ಹೋಗಬೇಕು ಅಂತ ನೀವು ಕೇಳಿದಾಗ "ಏಯ್.. ಅದೇನ್ ಕೇಳ್ತಿಯಾ? ಬಾಯಿ ಮುಚ್ಕೊಂಡ್ ಹೋಗು" ಅಂತ ಉತ್ತರ ಬಂತು ಅಂದ್ಕೊಳ್ಳಿ, ಆಗ ನಿಮ್ಮ ಮನಸ್ಥಿತಿ ಹ್ಯಾಗಿರುತ್ತೆ ಅಂತ ಯೋಚಿಸ್ಕೊಳ್ಳಿ. ಇದೊಂದೇ ಉದಾಹರಣೆ ಸಾಕು ನೀವು ನಿಮ್ಮ ಮಗುವಿನ ಜೊತೆ ಹ್ಯಾಗೆ ವರ್ತಿಸಬೇಕು ಅನ್ನೋದಕ್ಕೆ. ಮಗುವು ಪ್ರಪಂಚಕ್ಕೆ ಆಗಮಿಸಿದ ಅಮಾಯಕ ಪಯಣಿಗ ಎಂಬ ಅಂಶ ನಿಮ್ಮ ಗಮನದಲ್ಲಿರಲಿ.

ಮೊದಲ ಪಾಠಶಾಲೆಯಾದ ಮನೆಯಲ್ಲಿ ಮೊದಲ ಗುರುವಾದ ತಾಯಿ ಮಗುವಿಗೆ ಆದರ್ಶ ಗುರುವಾಗಬೇಕು. ಆದರ್ಶ ಗುರು ಅಥವಾ ಶಿಕ್ಷಕನ ಪ್ರಮುಖ ಲಕ್ಷಣಗಳೇನು? ಈ ಪ್ರಶ್ನೆಗೆ ಉತ್ತರ ತುಂಬ ಸುಲಭ, ಸತ್ಯ ಪಥದಲಿ ಸಾಗುವುದಕ್ಕೆ ಪ್ರೇರಣೆ ನೀಡುವ, ಸ್ನೇಹ ಜೀವಿ, ವೈಜ್ಞಾನಿಕ ಚಿಂತನೆಯ ಹರಿಕಾರ, ಸಕಾರಾತ್ಮಕ ಭಾವನೆಗಳಿಗೆ ಒತ್ತು ಕೊಡುವ, ಕಂದಾಚಾರ ಹಾಗೂ ಮೂಢ ನಂಬಿಕೆಗಳಿಂದ ದೂರವಿರುವುದರ ಜೊತೆಗೆ ಮುಂದೊಮ್ಮೆ ನಾಡಿನ ನಾಗರೀಕನಾಗಲು ರೂಪಗೊಳ್ಳುತ್ತಿರುವ ಹಸುಳೆಗೆ ದೇಶಪ್ರೇಮದ ಭಾವನೆ ಮೂಡಲು ಪರೋಕ್ಷವಾಗಿ ಪ್ರೋತ್ಸಾಹಿಸುವ ಚೇತನದ ಚಿಲುಮೆಯಾಗಿರಬೇಕು. ಒಂದು ಮಾತು ಜ್ಞಾಪಕದಲ್ಲಿರಲಿ, ಆದರ್ಶ ಶಿಕ್ಷಕಿಯ ಗುಣ ಲಕ್ಷಣಗಳು ನಮ್ಮಲ್ಲಿವೆಯೆ? ಇದ್ದುದಾದರೆ ತುಂಬ ಒಳ್ಳೆಯದೇ ಆಯಿತು. ಒಂದು ವೇಳೆ ಇಲ್ಲವೆಂಬುದಾದರೆ, ಮೊದಲು

ನೀವು ಆದರ್ಶ ಶಿಕ್ಷಕಿಯಾಗಲು ಬೇಕಾದ ಗುಣಲಕ್ಷಣಗಳನ್ನು ಕಲಿತುಕೊಳ್ಳುವುದು ತುಂಬ ಅವಶ್ಯಕ. ಹಾಗೇಂತ ಒಬ್ಬ ತಾಯಿ ಕಲಿತುಕೊಳ್ಳಲು ಹಾಗೂ ತರಬೇತಿ ಪಡೆದುಕೊಳ್ಳಲು ಯಾವುದೇ ವಿದ್ಯಾಲಯ ಅಥವಾ ವಿಶ್ವವಿದ್ಯಾಲಯಕ್ಕೆ ಹೋಗುವ ಅವಶ್ಯಕತೆ ಇಲ್ಲ. ಉನ್ನತ ಶಿಕ್ಷಣ ಹೊಂದಿದ ವಿದ್ಯಾವಂತೆಯಾಗಿರಬೇಕೆಂದೇನೂ ಇಲ್ಲ. ಹಾಗೊಂದು ವೇಳೆ ಆಗಿದ್ದರೆ ಛತ್ರಪತಿ ಶಿವಾಜಿ ಮಹಾರಾಜರ ತಾಯಿ ಜೀಜಾಬಾಯಿಯೂ ಸೇರಿದಂತೆ ಬಾಬಾಸಾಹೇಬ ಅಂಬೇಡ್ಕರ, ಲಾಲ ಬಹಾದ್ದೂರ ಶಾಸ್ತ್ರಿ, ಸುಭಾಶಚಂದ್ರ ಬೋಸ್, ಭಗತ್‌ಸಿಂಗ್, ಸ್ವಾಮಿ ವಿವೇಕಾನಂದ, ರಾಜಾರಾಂ ಮೋಹನರಾಯರಂತಹ ಧೀರೋದಾತ್ತ ಪುರುಷರ ತಾಯಂದಿರು ಉನ್ನತ ಶಿಕ್ಷಣ ಪಡೆದ ವಿದ್ಯಾವಂತರೇ ಆಗಿರುತ್ತಿದ್ದರು. ಒಂದು ಮಾತು ನಿಜ, ಅವರುಗಳೆಲ್ಲ ಸಹನಶೀಲರು, ಸುಸಂಸ್ಕೃತರು, ಸುಶೀಲರು, ವೈಜ್ಞಾನಿಕ ಮನೋಭಾವನೆಯ ದೈವೀ ಭಕ್ತರಾಗಿದ್ದರು. ಆದುದರಿಂದಲೇ ಆ ಮಹಾಮಾತೆಯರು ಅನರ್ಘ್ಯ ರತ್ನಗಳನ್ನು ಪ್ರಪಂಚಕ್ಕೆ ನೀಡಿ ಮಹಾ ಮಾತೆಯರಾದರು.

ಜೀವ ಜಗತ್ತಿನ ವಿಸ್ಮಯಗಳಲ್ಲಿ ಒಂದಾದ ಎಲ್ಲ ಜೀವ ರಾಶಿಗಳು ವಂಶಾಭಿವೃದ್ಧಿಯ ವಿಷಯದಲ್ಲಿ ಮಗುವಿಗೆ ಬದುಕುವುದನ್ನು ಕಲಿಸುವ ಪರಂಪರೆಯು ಯುಗ–ಯುಗಗಳಿಂದ ನಡೆದುಕೊಂಡು ಬಂದಿದೆ. ಹಕ್ಕಿ ಪಕ್ಷಿಗಳು ದೂರದಿಂದ ತಮ್ಮ ಚುಂಚಿನಲ್ಲಿ ಆಹಾರ ತಂದು ಗೂಡಿನಲ್ಲಿರುವ ಮರಿಗಳಿಗೆ ತಿನ್ನಿಸುವುದರ ಜೊತೆಗೆ ರೆಕ್ಕೆ ಬಲಿಯುತ್ತಿದ್ದಂತೆ ತಮ್ಮ ಇಂಚರದ ಸೊನ್ನೆಯೊಂದಿಗೆ ಹಾರಲು ಪ್ರೋತ್ಸಾಹಿಸಿ ಪ್ರೇರೇಪಿಸುತ್ತವೆ. ಇನ್ನು ಪ್ರಾಣಿಗಳು ತಮ್ಮ ಮರಿಗಳಿಗೆ ಹಾಲುಣಿಸಿ ಸೊಂಡಿಲು, ಕೈ ಕಾಲು ಹಾಗೂ ತಲೆಯ ಆಸರೆ ಕೊಟ್ಟು ಎದ್ದು ಹೆಜ್ಜೆಯನ್ನಿಡಲು ಸಹಾಯ ಮಾಡುವುದಿಲ್ಲವೆ? ವಿಶ್ವವೇ ಮಾತೆಯ ಮಮತೆಯ ಮಮಕಾರದಲ್ಲಿ ಮುಳುಗಿರುವಾಗ ಕರ್ತವ್ಯಕ್ಕೆ ವಿಮುಖರಾಗಿ 'ತಲೆ ಹರಟೆ,' 'ತಲೆ ತಿನ್ನೋಡಾ' 'ಬಾಯಿ ಮುಚ್ಕೊಂಡು ಸುಮ್ಕಿರ್ತೀಯೋ ಎರಡು ಬಾರಿಸ್ಲಾ?' ಎಂದೆಲ್ಲ ಮೂದಲಿಸಿ ಮಗುವಿನ ಮನಸ್ಸನ್ನು ನೋಯಿಸುವುದು ಹಾಗೂ ಹೊಸ ವಿಷಯವೊಂದರ ವಿಚಾರ ತಿಳಿದುಕೊಳ್ಳಬೇಕೆಂಬ ಆ ಹಸುಳೆಗೆ ನಿರಾಶೆ ಉಂಟುಮಾಡುವುದು ಎಷ್ಟು ಸರಿ? "ಮಾತೃ ದೇವೋ ಭವಃ" ಎಂದು ದೇವರ ಸ್ಥಾನ ಪಡೆದುಕೊಂಡಿರುವ

ನೀವು ಅದಕ್ಕೆ ನ್ಯಾಯ ಒದಗಿಸಬೇಕಲ್ಲವೆ? ತಾಳ್ಮೆ ಇರಲಿ. ಕ್ಷಮಯಾ ಧರಿತ್ರಿ ಎನ್ನವುದಾದರೆ "ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ರೂಪಿ ಕಡುಕೋಪದ ಪ್ರದರ್ಶನವೇಕೆ"?

ತೊದಲ್ನುಡಿಗೆ ಅಣಿಯಾಗುವುದಕ್ಕೆ ಮೊದಲು ತಾಯಿ ಎದೆ ಅಪ್ಪುಗೆಯಿಂದ ತೊಟ್ಟಿಲಿಗೆ ಸಾಗುವ ದಾರಿಯಲ್ಲಿ ಲಾಲಿ–ಜೋಗುಳದಂತಹ ಸುಮಧುರ ಸಂಗೀತಮಯ ಹಾಡು, ಸಪ್ತ ಸ್ವರಗಳು ಸಮ್ಮಿಳಿತಗೊಂಡ ಮಧುರವಾದ ಹಾಡು ಆಲಿಸುತ್ತಲೇ ಮಗುವು ಜಗದರಿವಿಲ್ಲದೆ ನಿದ್ರಾದೇವಿಗೆ ಶರಣಾಗುತ್ತದೆ. ಹಾವಾಡಿಗನ ಪುಂಗಿಯ ನಾದಕ್ಕೆ ತಲೆದೂಗಿ ನಿಂತು ಬಿಡುವ ನಾಗರಹಾವಿನಂತೆ ಅಳುವನ್ನು ನಿಲ್ಲಿಸಿ, ಹಟವನ್ನು ಮರೆತು ಮುಗುಳ್ನಗುವಿನೊಂದಿಗೆ ಮಲಗಿ ಬಿಡುವುದು. ಹಸುಳೆ ಮಾತನ್ನಾಡದ ಮೂಕಪ್ರಾಣಿ, ತನಗಾದ ಹಸಿವು–ಬಾಯಾರಿಕೆಯನ್ನು ನಿಮ್ಮ ಗಮನಕ್ಕೆ ತರುವ ಏಕೈಕ ಮಾರ್ಗ ಅಳುವುದು. ಅಳುತ್ತಿರುವ ಮಗುವಿನ ಬೇಡಿಕೆ ಅರಿಯದ ತಾಯಿ ಗದರಿಸಿ, ಬೆದರಿಸಿ, ಹೊಡೆದು–ಬಡಿದು ಮಾಡಿ ಸುಮ್ಮನಾಗಿಸುವ ಅನಾವಶ್ಯಕ ಅಸ್ತ್ರದ ಪ್ರಯೋಗ ಮಾಡುವುದು ಹಿತಕರವಲ್ಲ. ಹೊಡೆದು–ಬಡೆದು ಸುಮ್ಮನಾಗಿಸುವ ದುಸ್ಸಾಹಸಕ್ಕೆ ಕೈ ಹಾಕುವ ತಾಯಿ ಹಾಗೆ ಮಾಡುವುದಕ್ಕೆ ಮೊದಲು ಎರಡು ಸಾರಿ ಯೋಚಿಸಬೇಕು. ಯಾಕೇಂದ್ರೆ, ಹಾಗೆ ಮಾಡುವುದರಿಂದ ಮಗುವು ಇನ್ನಷ್ಟು ಉಗ್ರವಾಗುವುದರೊಂದಿಗೆ ಬಾಲ್ಯದಲ್ಲಿಯೇ ಹಟಮಾರಿಯಾಗಿ ಬೆಳೆದೀತು ಜೋಕೆ! ಶಾಂತತೆ, ಸಹಿಷ್ಣುತೆ, ಸಹಕಾರ ಹಾಗೂ ಪರೋಪಕಾರಿ ಸದ್ಗುಣಗಳಿಂದ ಕೂಡಿದ ಜನಪ್ರಿಯ ವ್ಯಕ್ತಿಯಾಗಿ ರೂಪಗೊಳ್ಳಬೇಕು ನನ್ನ ಮಗುವು ಎನ್ನುವುದಾದರೆ, ತಾಯಿಯು ತಪ್ಪಿಯೂ ಅನಾಗರೀಕಳಾಗಿ ವರ್ತಿಸಬಾರದು, ಹಾಗೇಂತ ಅತೀ ಮುದ್ದೂ ಕೂಡ ಅಪಾಯಕಾರಿ, ಮಗುವಿನ ಬೇಡಿಕೆಗೆ ಅನುಗುಣವಾಗಿ ಮೃದು ಧೋರಣೆಯಿಂದ ನಗುಮೊಗದಿಂದಲೇ ಪರಿಹಾರ ಕಂಡುಕೊಳ್ಳಬೇಕು. ಹೀಗೆ ಮಾಡುವುದರಿಂದ ಮಗುವೂ ಖುಷಿಪಡುತ್ತದೆ. ತಾಯಿಯೂ ನಿರಾಳ. ಮಗುವಿನ ಬೇಡಿಕೆ ಅದರ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಮಾರಕವಾಗಿದ್ದರೆ, ಅದರಿಂದಾಗುವ ದುಷ್ಪರಿಣಾಮದ ಕುರಿತು ತಿಳಿ ಹೇಳಿದಾಗ ಮಗುವು ತನ್ನ ತಪ್ಪಿನ ಅರಿವಾಗಿ ಬೇಡಿಕೆಯನ್ನು ಕೈ ಬಿಡುತ್ತದೆ.

ಈ ಪುಸ್ತಕದ ಆಯ್ದ ಕೆಲವೇ ಕೆಲವು ಪುಟಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.
ಸಂಪೂರ್ಣ ಪುಸ್ತಕಕ್ಕಾಗಿ ಸಂಪರ್ಕಿಸಿ:

ನಿರುತ ಪಬ್ಲಿಕೇಷನ್ಸ್

#326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,
ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,
ಬೆಂಗಳೂರು-560056. ದೂ: 080-23213710, 8073067542

ಇಮೇಲ್: nirutapublications@gmail.com

www.nirutapublications.org

ಶಾಲೆಯೊಂದಿಗೆ ಸಮನ್ವಯ

ಆಟ, ಓಟ, ಊಟವೂ ಸೇರಿದಂತೆ ದೈನಂದಿನ ಕಾರ್ಯ ಚಟುವಟಿಕೆ ಹಾಗೂ ನಿದ್ರೆಯನ್ನು ಮನೆ ಹಾಗೂ ಮನೆಯ ಆಸುಪಾಸಿನಲ್ಲಿ ತಂದೆ–ತಾಯಿ, ಬಂಧು–ಬಳಗ, ಗೆಳೆಯ–ಗೆಳತಿಯರೊಂದಿಗೆ ಸಮಯ ಕಳೆಯುವ ಮಗುವು ಬಾಕಿ ಸಮಯವನ್ನು ಓದು–ಅಧ್ಯಯನಕ್ಕಾಗಿ ಶಾಲಾ ಪರಿಸರದಲ್ಲಿ, ಶಿಕ್ಷಕರ ಸಮ್ಮುಖದಲ್ಲಿ ಸಮಯ ಕಳೆಯುತ್ತದೆ. ಮಗುವಿನ ಭವಿಷ್ಯ ನಿರ್ಮಾಣದ ನಿಜವಾದ ಕೇಂದ್ರ ಬಿಂದು ಶಾಲಾ ಪರಿಸರವೇ ಆಗಿದೆ. ಅಲ್ಲಿ ಮಗುವಿನ ಸರ್ವತೋಮುಖ ಬೆಳವಣಿಗೆಯ ತರಬೇತಿ ದೊರೆಯುತ್ತದೆಂಬ ನಂಬುಗೆಯೇ ಪಾಲಕರು ಪ್ರತಿ ಗಳಿಗೆಯೂ ಶಾಲೆಯತ್ತ ನೋಡುತ್ತಿರುವ ದೃಶ್ಯ ಸಾಮಾನ್ಯ. ಅದು ನಿಜವೂ ಹೌದು, ಅಲ್ಲಿ ಗುರುಗಳು ವಿದ್ಯೆ ಹೇಳಿಕೊಡುತ್ತಾರೆ. ಕಾಡುಗಲ್ಲೊಂದನ್ನು ಕೈಗೆತ್ತಿಕೊಂಡ ಶಿಲ್ಪಿ ಅತೀ ಜಾಗರೂಕತೆಯಿಂದ ತನ್ನ ಉಳಿ ಎಂಬ ನೈಪುಣ್ಯದಿಂದ ಕಲ್ಲಿಗೊಂದು ಸುಂದರ ಆಕಾರ ಕೊಟ್ಟು ಅತ್ಯಾಕರ್ಷಕ ಸುಂದರ ಮೂರ್ತಿಯನ್ನಾಗಿ ಮಾಡುವ ಶಿಲ್ಪಕಾರನೇ ಶಿಕ್ಷಕ. ಅದು ಒಬ್ಬ ಆದರ್ಶ ಶಿಕ್ಷಕನ ಆದ್ಯ ಕರ್ತವ್ಯವೂ ಕೂಡ ಹೌದು.

ಆದರ್ಶ ಶಿಕ್ಷಕನೊಬ್ಬ ತನಗೆ ಒದಗಿಬಂದ ಈ ಶಿಕ್ಷಕ ವೃತ್ತಿಯು ಸುವರ್ಣಾವಕಾಶವನ್ನು ಬಳಸಿಕೊಂಡು ವಿದ್ಯಾರ್ಥಿಯೊಬ್ಬ ಮುಂದೊಮ್ಮೆ ಸ್ವಸ್ಥ ಸಮಾಜದ ಆದರ್ಶ ನಾಗರೀಕನಾಗಿ ಬಿಂಬಿತವಾಗಲು ಶ್ರಮಿಸಿ ತನಗೆ ನೀಡಲಾದ ಬ್ರಹ್ಮತ್ವ ಉಪಾಧಿಗೆ ಸಾರ್ಥಕ್ಯೆ ಕೊಡುತ್ತಾನೆ. ಕಾಯಾ–ವಾಚಾ–ಮನಸಾ ದುಡಿಯುತ್ತಾನೆ. ಶಿಕ್ಷಕ ವೃತ್ತಿಯೊಂದು ತಪಸ್ಸು. ಅಧ್ಯಯನನಿರತ ತನ್ನ ವಿದ್ಯಾರ್ಥಿಗಳನ್ನು ಸಕಲಗುಣಸಂಪನ್ನರಾಗಿ ಬೆಳೆಯಲು ಬೇಕಾದ ವಿದ್ಯೆಯನ್ನು ಧಾರೆಯೆರೆದುಕೊಡುತ್ತಾನೆ. ಪಾಲಕರೂ ಶಿಕ್ಷಕರಿಂದ ಇದನ್ನೇ ನಿರೀಕ್ಷಿಸುತ್ತಾರೆ

ಕೂಡ. ಇದೆಲ್ಲ ನಿಜ. ಆದರೆ, ಪಾಲಕರ ಅಪೇಕ್ಷೆ, ಆಶೆ ಹಾಗೂ ಅಭಿಲಾಷೆಗಳಿಗೆ ಮಿತಿಯೂ ಬೇಕು. ಹಲವು ಬಾರಿ ಪಾಲಕರು ಆತುರ, ಅವಸರ ಹಾಗೂ ಆವೇಶಗಳಿಂದಾಗಿ ವಿದ್ಯಾದಾನ ಮಾಡುವ ಅಧ್ಯಾಪಕರು ಹಿಂಸೆಯನ್ನನುಭವಿಸಬೇಕಾಗಿ ಬರುವ ಪ್ರಸಂಗಗಳನೇಕ. ಪ್ರತಿ ಶಾಲೆಯಲ್ಲಿಯೂ ಪಾಲಕರು–ಪ್ರಾಧ್ಯಾಪಕರ ಸಮನ್ವಯ ಸಮಿತಿ ಇರುತ್ತದೆ. ಇದರ ಕಾರ್ಯಕಾರಿ ಸಮಿತಿಯು ಪ್ರತಿ ತಿಂಗಳು ಸಭೆ ಸೇರಿ ಶಾಲಾ ಕಾರ್ಯ ಚಟುವಟಿಕೆ ಹಾಗೂ ಕಾರ್ಯ ಯೋಜನೆಗಳ ಬಗ್ಗೆ ಚರ್ಚೆ ಮಾಡಿ ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ಹಮ್ಮಿಕೊಳ್ಳಲಾದ ಅಲ್ಪಕಾಲಿಕ ಮತ್ತು ದೀರ್ಘಕಾಲಿಕ ಕಾರ್ಯಕ್ರಮಗಳನ್ನು ಸಭೆಯಲ್ಲಿ ಚರ್ಚಿಸಲಾಗುತ್ತದೆ. ಶಾಲಾ ಮಕ್ಕಳ ಪ್ರಗತಿಯಲ್ಲಿ ಬರುವ ತೊಂದರೆ ಹಾಗೂ ನಿವಾರಣೋಪಾಯಗಳ ಕುರಿತಾಗಿ ಸಲಹೆಗಳನ್ನು ಪಡೆದುಕೊಳ್ಳಲಾಗುತ್ತದೆ. ಪಾಲಕರು ತಮ್ಮ ಅಭಿಪ್ರಾಯ ಹಾಗೂ ಸಲಹೆಗಳನ್ನು ತಿಳಿಸಿದರೆ ಶಿಕ್ಷಕರು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯ ವಿಷಯದಲ್ಲಿ ಹಾಕಿಕೊಂಡ ಕಾರ್ಯಕ್ರಮವನ್ನು ವಿವರಿಸುತ್ತಾರೆ. ಇದೊಂದು ಆರೋಗ್ಯಕರ ಬೆಳವಣಿಗೆಗೆ ಪೂರಕವಾದ ವೇದಿಕೆಯಾಗಿದೆ.

ಇದೆಲ್ಲ ಸರಿ, ಇದನ್ನುಳಿದು ಹಲವು ಪಾಲಕರು ವಿನಾಕಾರಣ ಮೇಲಿಂದ ಮೇಲೆ ಶಾಲೆಗೆ ಭೇಟಿ ಕೊಟ್ಟು "ನೀವು ನಮ್ಮ ಮಗುವಿಗೆ ಸರಿಯಾಗಿ ಪಾಠಾನೇ ಮಾಡ್ತಾ ಇಲ್ಲ, ಹೀಗಾದ್ರೆ ನಮ್ಮ ಮಗುವು ಜೀವನದಲ್ಲಿ ಮುಂದೆ ಬರುವುದಾದರೂ ಹೇಗೆ?" "ನಮ್ಮ ಮಗುವಿಗೆ ನೀವು ಗೃಹ ಕಾರ್ಯವನ್ನೇಕೆ ಕೊಡುತ್ತಿಲ್ಲ?" "ನೀವು ನಮ್ಮ ಮಗುವಿಗೆ ತುಂಬ ಸಲುಗೆ ಕೊಟ್ಟಿದ್ದೀರಿ, ಸಂದರ್ಭ ಬಂದರೆ ನಾಲ್ಕು ಏಟು ಹೊಡೆಯಬೇಕು ನೀವು" "ಶಾಲಾ ಪ್ರಗತಿ ಪತ್ರಿಕೆಯಲ್ಲಿ ನಮ್ಮ ಮಗು ಕಡಿಮೆ ಅಂಕ ತಗೊಂಡ್ರೆ ಒಂದಿನಾ ನಾವು ಊಟನೇ ಕೊಡಲ್ಲ". "ಹೋದ ವರ್ಷ ನಮ್ಮ ಮಗಳು ಕಡಿಮೆ ಅಂಕ ತಗೊಂಡಳು, ಮುಂದೇನಾಯ್ತು ಅಂತೀರಾ? ಅವರಪ್ಪ ಮಗಳಿಗೆ ತಮ್ಮ ಪ್ಯಾಂಟ್ ಬೆಲ್ಟ್ ತಕ್ಕೊಂಡು ಹೆಂಗ್ಹೊಡದ್ರು ಅಂತೀರಾ? ಬಾಸುಂಡೆ ಬಂದು ಅರಿಷಿಣ ಹಚ್ಚಿ ಕಾಯಿಸಿಕೊಳ್ಳೋ ಥರಾ ಮಾಡಿದ್ರು". "ಛಡಿ ಛಂ ಛಂ.. ವಿದ್ಯಾ ಗಂಗಂ ಗೊತ್ತಾ ನಿಮಗೆ"?

ಇನ್ನೂ ಕೆಲವು ಜನ ಪಾಲಕರು ಮೂರು ಮೂರು ದಿನಕ್ಕೊಮ್ಮೆ ಶಾಲೆಗೆ ಹೋಗಿ "ಏನ್ ಮೇಡಂ.. ನೀವು ಮೊನ್ನೆ ನಮ್ಮ ಹುಡುಗನ್ನ ಆ ಥರಾ ಗದರಿಸೋದಾ? ಏನೋ ಸಹಪಾಠಿಯ ಬ್ಯಾಗ್‌ನಿಂದ ಒಂದು ಪೆನ್ಸಿಲ್ ತಮಾಷೆಗಾಗಿ ತಗೊಂಡ್ರೆ ನೀವು ಹೇಳಿದ್ರಂತೆ "ಕಳ್ಳತನ ಮಾಡಬೇಡ ಕಣಯ್ಯ, ಮುಂದೆ ಇದೇ ಅಭ್ಯಾಸ ಮುಂದುವರೆಯುತ್ತೆ ಅಂತೆಲ್ಲ ಹೇಳಿ ಅವನ ಸ್ನೇಹಿತರ ಮುಂದೆ ಅಪಮಾನ ಮಾಡಿದ್ರಂತೆ, ಮುಖ ಸಪ್ಪಗೆ ಮಾಡ್ಕೊಂಡು ಮನೆಗೆ ಬಂದದ್ದನ್ನ ನೋಡಿ ನನ್ನ ಕರುಳು ಚುರ್ ಅಂತು. ನಿಮ್ಮ ಕಣ್ಣಲ್ಲಿ ನಮ್ಮ ಮಗ ಕಳ್ಳನ ಥರಾ ಕಾಣಿಸ್ತಾನಾ" ಅಂತ ಹೇಳಿದ್ರೆ ಇನ್ನೊಬ್ಬ ಪಾಲಕ ಮಹಾಶಯರು ಶಾಲೆಗೆ ಬಂದದ್ದೇ ಶಿಕ್ಷಕಿಗೆ "ಏನ್ರಿ ಮೇಡಂ.. ಮೊನ್ನೆ ನಮ್ಮ ಮನೆಗೆ ಯಾರೋ ನೆಂಟರು ಬಂದಿದ್ರು. ನೀವು ಕೊಟ್ಟ ಗೃಹ ಕಾರ್ಯ ಮಾಡೋಕಾಗಲಿಲ್ಲ ನಮ್ಮ ಹುಡುಗನಿಗೆ ಅದನ್ನೆ ನೆಪವಾಗಿಟ್ಟುಕೊಂಡು ಅರ್ಧ ಗಂಟೆ ನಿಂತ್ಕೊಳ್ಳೋ ಶಿಕ್ಷೆ ಕೊಟ್ರಂತೆ, ಅದೇನು ಮೇಡಂ ಒಂದು ದಿನ ನೀವು ಕೊಟ್ಟ ಗೃಹಕಾರ್ಯ ಮಾಡಿಕೊಂಡು ಬಾರದೇ ಇದ್ರೆ ಆಕಾಶವೇನು ತಲೆಯ ಮೇಲೆ ಬಿದ್ದು ಬಿಡುತ್ತ"?

ಹೀಗೆ, ಹೀಗೆಯೇ ಶಾಲೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳು ಸ್ವತಂತ್ರವಾಗಿ, ನೈಸರ್ಗಿಕವಾಗಿ ಬೆಳವಣಿಗೆ ಹೊಂದಲಿ ಎಂದು ಓದು ಒಕ್ಕಾಲು, ಬುದ್ಧಿ ಮುಕ್ಕಾಲು, ಸೂಕ್ತಿಗೆ ಒತ್ತು ಕೊಟ್ಟು ಶ್ರದ್ಧೆಯಿಂದ ಮಕ್ಕಳಿಗೆ ಪಾಠ ಮಾಡುವ ಶಿಕ್ಷಕರಿಗೆ ಪಾಲಕರು ಈ ರೀತಿ ಹಿಂಸಿಸುವುದು ಸರಿಯೆ? ಶಿಸ್ತಿನ ಸಿಪಾಯಿಗಳಾಗಿ ಮಕ್ಕಳು ಜೀವನದಲ್ಲಿ ಮುಂದೆ ಬರಲಿ ಎಂದು ದುಡಿಯುತ್ತಿರುವ ಶಿಕ್ಷಕರು ಸ್ವಲ್ಪ ಶಿಕ್ಷೆಗೆ ಒಳಪಡಿಸಿ ಬುದ್ಧಿ ಹೇಳಿದರೂ ಮಹಾ ಅಪರಾಧಿ ಸ್ಥಾನದಲ್ಲಿ ಶಿಕ್ಷಕರನ್ನು ನಿಲ್ಲಿಸುವ ಪರಿಪಾಠ ಇವತ್ತಿನ ದಿನಗಳಲ್ಲಿ ಹೆಚ್ಚಾಗ್ತಾ ಇರೋದು ಒಳ್ಳೆಯ ಬೆಳವಣಿಗೆಯಲ್ಲ.

ಇತ್ತೀಚಿನ ದಿನಗಳಲ್ಲಿ ಶಿಕ್ಷಕರು ಹಾಗೂ ಪಾಲಕರ ಮಧ್ಯೆ ಸಮನ್ವಯದ ಕೊರತೆ ಎದ್ದು ಕಾಣುತ್ತಿದೆ. ವಿದ್ಯಾರ್ಥಿಗಳಿಗೆ ಸ್ವತಂತ್ರ ಬುದ್ಧಿಯಿಂದ ಪಾಠ ಮಾಡಬೇಕಾದ ಶಿಕ್ಷಕರು ಪಾಲಕರಿಂದ ಬರುವ ಹಲವು ಸಲಹೆ ಸೂಚನೆಗಳನ್ನು ತಲೆಯಲ್ಲಿ ತುಂಬಿಕೊಂಡು ಪಾಠ ಮಾಡಬೇಕಾಗಿ ಬಂದಿರುವ ದುಸ್ಥಿತಿಯಲ್ಲಿ ಶಿಕ್ಷಕರು ಪರೋಕ್ಷವಾಗಿ ಮಾನಸಿಕ ಒತ್ತಡಕ್ಕೆ ಒಳಗಾಗಿ ಕೆಲಸ ಮಾಡಬೇಕಾದ ಪರಿಸ್ಥಿತಿಯಿಂದ

ಈ ಪುಸ್ತಕದ ಆಯ್ದ ಕೆಲವೇ ಕೆಲವು ಪುಟಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.
ಸಂಪೂರ್ಣ ಪುಸ್ತಕಕ್ಕಾಗಿ ಸಂಪರ್ಕಿಸಿ:

ನಿರುತ ಪಬ್ಲಿಕೇಷನ್ಸ್

#326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,
ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,
ಬೆಂಗಳೂರು-560056. ದೂ: 080-23213710, 8073067542

ಇಮೇಲ್: nirutapublications@gmail.com

www.nirutapublications.org

ಶಿಕ್ಷಣ ರಥ ನೀತಿ ಪಥ

"ಕಾದಿ ಕ್ಷತ್ರಿಯನಾಗು, ಓದಿ ಬ್ರಾಹ್ಮಣನಾಗು, ಏನಾದರೂ ಆಗು ಮೊದಲು ಮಾನವನಾಗು" ಎಂದಿದ್ದಾರೆ ಹಿರಿಯರು. ಮಕ್ಕಳು ಅಕ್ಷರಾಭ್ಯಾಸ ಮಾಡಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾದರೆ ಸಾಲದು. ಅವರು ಸುಶಿಕ್ಷಿತರಾಗಬೇಕು. ಶಿಕ್ಷಣದ ಜೊತೆಗೆ ಮಾನವೀಯ ಔದಾರ್ಯ, ನ್ಯಾಯ, ನೀತಿ, ಧರ್ಮ, ಸಹಿಷ್ಣುತೆಗಳು ಸಮ್ಮಿಳಿತವಾಗಿರಬೇಕು. ದಾನವೀಯ, ದುರುಳ, ದುರ್ಬದ್ಧಿಗಳು ಹುಟ್ಟಿಕೊಳ್ಳದೇ ಸಹಕಾರ, ಸಹಯೋಗ, ಸದ್ಭಾವನೆಗಳು ಅಂಕುರಿತಗೊಳ್ಳುವ ಪರಿಸರವನ್ನು ಕಲ್ಪಿಸಿಕೊಡುವ ಗುರುತರ ಜವಾಬ್ದಾರಿ ಪಾಲಕರದ್ದು.

ಮನೆತನ, ಗ್ರಾಮ, ದೇಶ–ಪ್ರದೇಶ ಹಾಗೂ ನಾಡಿನಲ್ಲಿ ಕೀರುತಿಯ ಪತಾಕೆಯನ್ನು ಹಾರಿಸುವ ಮಗುವು ತನ್ನದಾಗಬೇಕು. ಸುಂದರ ಸಮಾಜ ನಿರ್ಮಾಣದ ಕಾರ್ಯದಲ್ಲಿ ಸಿಂಹಪಾಲನ್ನು ನೀಡುವ ಸತ್ಪ್ರಜೆ ತನ್ನ ಮಗುವಾಗಬೇಕು ಎಂಬ ಹೆಬ್ಬಯಕೆಯ ಪಾಲಕರು ಮಗುವಿನ ಶ್ರೇಯೋಭಿವೃದ್ಧಿಗಾಗಿ ನಡೆವ ಹಾದಿ ಧರ್ಮದಿಂದ ಕೂಡಿರಬೇಕು. ಇದಕ್ಕಾಗಿ ಪಾಲಕರು ಮಾಡಬೇಕಾದ ಪ್ರಮುಖ ಕೆಲಸವೆಂದರೆ ಮಗುವು ಚಲಿಸುವ ದಾರಿಯನ್ನು ಮಗುವಿನ ಗಮನಕ್ಕೆ ಬಾರದಂತೆ ನೋಡುತ್ತಿರಬೇಕು. ಮಗುವು ನಡೆವ ದಾರಿ ಅಧರ್ಮದತ್ತ ಸಾಗುತ್ತಲಿದ್ದರೆ, ತಕ್ಷಣವೇ ಉಪಾಯದಿಂದ ಎಚ್ಚರಿಸಿ ಅದರಿಂದಾಗಬಹುದಾದ ಅಪಾಯ ಹಾಗೂ ದುಷ್ಪರಿಣಾಮಗಳನ್ನು ಕುರಿತು ತಿಳಿಹೇಳಬೇಕು. ನೀತಿ–ಪಥದಲ್ಲಿ ಸಾಗುವುದರಿಂದ ಮಾತ್ರ ಜೀವನದಲ್ಲಿ ಯಶಸ್ಸು ಹಾಗೂ ಕೀರ್ತಿ ಸಿಗುತ್ತದೆ ಎಂಬ ಮಾತನ್ನು ಮಗುವಿನ ಗಮನಕ್ಕೆ ತರಬೇಕು. ಸತ್ಯ, ನ್ಯಾಯ, ಧರ್ಮದ ರಹದಾರಿಯಲ್ಲಿ ನಡೆಯುತ್ತಿದ್ದರೆ, ದೊರಕುವ ಸಾಫಲ್ಯತೆಯ ಸಂಭ್ರಮವನ್ನು ವರ್ಣಿಸಿದಾಗ ಮಗುವು ತನ್ನ ಶೈಕ್ಷಣಿಕ ಅಧ್ಯಯನದೊಂದಿಗೆ ನೀತಿಯ ಸಾರವನ್ನು ಹೃನ್ಮನದಲ್ಲಿ ಪೋಷಿಸುತ್ತ ಸಾಗುತ್ತದೆ.

ಶಿಕ್ಷಣವೆಂದರೆ ಅಕ್ಷರ ಜ್ಞಾನ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸುವ ಯಂತ್ರವನ್ನು ಸಿದ್ಧಪಡಿಸುವ ಕಾರ್ಯವಾಗಬಾರದು. ಅದು ಶಿಕ್ಷಣದ ಉದ್ದೇಶವೂ ಅಲ್ಲ. ಮಗುವಿನ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಪೂರಕ ವಾತಾವರಣ ಪಾಲಕರಿಂದಾಗಬೇಕು.

ತಾಯಿಯ ಗರ್ಭದಿಂದ ಜನಿಸಿದ ಮಗುವು ಕೇವಲ ಮಾಂಸದ ಮುದ್ದೆ. ದಿನಗಳು–ಮಾಸಗಳು–ವರುಷಗಳು ಕಳೆದಂತೆ ಮಗುವಿಗೆ ಪ್ರಪಂಚದ ಆಗುಹೋಗು, ಸತ್ಯ–ಮಿಥ್ಯ, ಪಾಪ–ಪುಣ್ಯ, ಹಿಂಸೆ–ಅಹಿಂಸೆ, ಜ್ಞಾನ–ಅಜ್ಞಾನ, ವೈಜ್ಞಾನಿಕ–ಅವೈಜ್ಞಾನಿಕ ವಿಚಾರಗಳು ಮಗುವಿನ ಅರಿವಿಗೆ ಬರುವುದೇ ಶಿಕ್ಷಣ ಅಥವಾ ಧೀ ಶಕ್ತಿ. ಈ ಶಿಕ್ಷಣ ಅಥವಾ ಧೀ ಶಕ್ತಿಯ ಆರಂಭ ಎಂದಿನಿಂದ ಎಂಬ ಪ್ರಶ್ನೆಗೆ ಉತ್ತರ 'ಗರ್ಭದಿಂದಲೇ' ಎಂದು ಹೇಳಬಹುದು. ಗರ್ಭಾವಸ್ಥೆಯಲ್ಲಿರುವ ಮಗುವು ತಾಯಿಯು ಸೇವಿಸುವ ಆಹಾರ ವಿಹಾರ ಹಾಗೂ ಆಚಾರ ವಿಚಾರಗಳಿಗೆ ಸ್ಪಂದಿಸುತ್ತ ಸಾಗುತ್ತದೆ ಎನ್ನುವುದಕ್ಕೆ ದಾನವ ಕುಲದಲ್ಲಿ ಜನಿಸಿದ ಪ್ರಹ್ಲಾದ ಅಚಲವಾದ ದೈವೀ ಭಕ್ತನಾಗಿದ್ದುದೇ ಆಗಿತ್ತು.

ಮಹಾಭಾರತ ಮಹಾಕಾವ್ಯದಲ್ಲಿನ ಒಂದು ಘಟನೆ, ಶ್ರೀಕೃಷ್ಣ ಪರಮಾತ್ಮನು ಗರ್ಭಿಣಿಯಾದ ಸಹೋದರಿ ಸುಭದ್ರೆಯನ್ನು ರಥದಲ್ಲಿ ಕೂರಿಸಿಕೊಂಡು ದ್ವಾರಕೆಗೆ ಹೋಗುವ ಮಾರ್ಗ ಮಧ್ಯೆದಲ್ಲಿ ಚಕ್ರವ್ಯೂಹವನ್ನು ಭೇದಿಸುವ ತಂತ್ರವನ್ನು ವಿವರಿಸುತ್ತ ಸಾಗುತ್ತಾನೆ. ಸ್ವಲ್ಪ ದಾರಿ ಕ್ರಮಿಸಿದ ಮೇಲೆ ಬರೀ "ಹೂಂ....." ಗುಟ್ಟುವ ಧ್ವನಿ ಮಾತ್ರ ಕೇಳಿಸುತ್ತದೆ. ಸಂಶಯಗೊಂಡ ಕೃಷ್ಣ ಹಿಂದಿರುಗಿ ನೋಡಿದರೆ ತಂಗಿ ಸುಭದ್ರೆ ನಿದ್ರಿಸುತ್ತಿದ್ದಾಳೆ. ಅಂದರೆ, ಅವಳ ಗರ್ಭದಲ್ಲಿದ್ದ ಮಗು ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸುವ ತಂತ್ರವನ್ನು ಅರ್ಥಮಾಡಿಕೊಳ್ಳುತ್ತ ಸಾಗಿರುತ್ತದೆ. ಮುಂದೆ ಮಹಾಭಾರತ ಯುದ್ಧ ಕಾಲದಲ್ಲಿ ಕೌರವರು ಒಡ್ಡಿದ ಚಕ್ರವ್ಯೂಹ ಭೇದಿಸಲು ಅಭಿಮನ್ಯು ಸನ್ನದ್ಧನಾಗುತ್ತಾನೆ.

ತಾಯಿಯು ಸೇವಿಸುವ ಆಹಾರ, ವಾಸಿಸುವ ಪರಿಸರ, ರೂಢಿಸಿಕೊಂಡ ಹವ್ಯಾಸ ಹಾಗೂ ಆಚಾರ–ವಿಚಾರಗಳ ನೇರ ಪ್ರಭಾವ ಗರ್ಭದಲ್ಲಿರುವ ಮಗುವಿನ ಮೇಲೆ ಪ್ರಭಾವ ಬೀರಬಲ್ಲ ಅಂಶಗಳು ಎಂಬುದನ್ನು ಹಲವು ಸಂಶೋಧನೆಗಳ ಮುಖಾಂತರ ವೈದ್ಯ ವಿಜ್ಞಾನ ದೃಢಪಡಿಸಿದೆ. ಆದುದರಿಂದ ಮಗುವಿನ

ಅಕ್ಷರಾಭ್ಯಾಸದ ಜೊತೆಗೆ ಪ್ರಕೃತಿಯೊಂದಿಗೆ ಹೊಂದಿಕೊಂಡು ಸಾಗಿ ಜೀವನ ಸಾಫಲ್ಯ ಪಡೆಯಲು ವಾತಾವರಣ ಸಿದ್ಧಪಡಿಸಬೇಕಾದುದು ಪಾಲಕರ ಕರ್ತವ್ಯ. ಖ್ಯಾತ ಶಿಕ್ಷಣ ತಜ್ಞ ಡ್ಯೂಯಿ ಹೇಳ್ತಾರೆ "ಮಗುವು ಸಮಾಜದಲ್ಲಿ ಬೆರೆತು ಬಾಳುವಂತೆ ಮಾಡುವುದೇ ಹಿರಿದಾದ ಶಿಕ್ಷಣ" ಎಂದು.

"ಮಗುವಿನ ಮೆದುಳಿನಲ್ಲಿ ಮಾಹಿತಿ ತುರುಕುವುದು ಶಿಕ್ಷಣವಲ್ಲ. ಉಚ್ಚ ವಿಚಾರಗಳು ರಕ್ತಗತವಾಗಿ ಜೀವನದಲ್ಲಿ ಚೈತನ್ಯ ಮೂಡುವಂತಾಗುವುದರ ಜೊತೆಗೆ ಶೀಲ ಮೈತುಂಬುವಂತೆ ಮಾಡುವುದೇ ಶಿಕ್ಷಣ" ಎಂದು ಹೇಳಿದ್ದಾರೆ ಸ್ವಾಮಿ ವಿವೇಕಾನಂದರು. ಒಂದೊಮ್ಮೆ ಶಿಕ್ಷಕರಾಗಿ ವೃತ್ತಿ ಆರಂಭಿಸಿ ದೇಶದ ಅತ್ಯುನ್ನತ ರಾಷ್ಟ್ರಪತಿ ಹುದ್ದೆಯನ್ನಲಂಕರಿಸಿದ ಶ್ರೇಷ್ಠ ಶಿಕ್ಷಣ ತಜ್ಞ ಸರ್ವಪಲ್ಲಿ ರಾಧಾಕೃಷ್ಣನ್ ಹೇಳ್ತಾರೆ "ಮಕ್ಕಳು ಮಾನವರಾಗಿ, ನಾಗರೀಕರಾಗಿ ಸಭ್ಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಇನ್ನೊಬ್ಬರೊಡನೆ ಗೌರವ ಘನತೆಗಳಿಂದ ವ್ಯವಹರಿಸುವಂತೆ ಮಾಡುವುದೇ ಶಿಕ್ಷಣ" ಎಂದು ಉದ್ಗರಿಸಿದ್ದಾರೆ.

ದಾರ್ಶನಿಕರು ಹಾಗೂ ತತ್ವಜ್ಞಾನಿಗಳೂ ಆದ ಪ್ಲೇಟೋ "ಭವಿಷ್ಯದಲ್ಲಿ ಸುಖ–ದುಃಖಗಳನ್ನು ಸಮ–ಸಮವಾಗಿ ಅನುಭವಿಸುವ ಸಾಮರ್ಥ್ಯವನ್ನು ಮಗುವಿನಲ್ಲಿ ಬೆಳೆಸುವುದೇ ಶಿಕ್ಷಣ" ಎಂದು ಹೇಳಿದ್ದಾರೆ. ಜೀವನ ಕೇವಲ ಸುಖದ ಸುಪ್ಪತ್ತಿಗೆಯಲ್ಲ. ಗುಲಾಬಿಯೊಂದಿಗೆ ಮುಳ್ಳು ಜೊತೆಗೆ ಇರುವಂತೆ ಸುಖದ ನಂತರ ದುಃಖ ಹಾಗೆಯೇ ದುಃಖದ ನಂತರ ಸುಖಗಳು ಬರುವುದು ಸಹಜವೂ ಹೌದು, ಪ್ರಕೃತಿಯ ನಿಯಮವೂ ಹೌದು. ಈ ಪ್ರಕೃತಿಗೆ ಹೊಂದಿಕೊಂಡು ಹೋಗುವುದಕ್ಕೆ ಬೇಕಾದ ಸಂಕಲ್ಪ ಆತ್ಮಸ್ಥೈರ್ಯ ಹಾಗೂ ಸಹನೆಗಳೊಂದಿಗೆ ಬೆರೆತು ಸಾಗುವುದಕ್ಕೆ ಅನುಕೂಲವಾಗುವಂತೆ ತರಬೇತುಗೊಳ್ಳುವ ವಿದ್ಯಾರ್ಜನೆಯ ಅವಧಿಯಲ್ಲಿ ತಂದೆ–ತಾಯಿಗಳು ಪ್ರೇರಣೆ ನೀಡುತ್ತಿರಬೇಕು.

ಶಿಕ್ಷಣ ಒಂದು ನಿರಂತರ ಪ್ರಕ್ರಿಯೆ. ಪಾಠಶಾಲೆ ಹಾಗೂ ವಿದ್ಯಾಲಯಗಳು ನೀಡುವ ಶಿಕ್ಷಣಕ್ಕೆ ಒಂದು ಮಿತಿಯುಂಟು. ಆದರೆ, ಕಲಿಕೆಯ ಪ್ರಕ್ರಿಯೆ ಜೀವನದಾದ್ಯಂತ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಇಂದಿಗೆ ನಾನು ಎಲ್ಲವನ್ನೂ ಕಲಿತುಕೊಂಡು ಬಿಟ್ಟೆ, ನಾನು ಸರ್ವಜ್ಞಾನಿ ಎಂದು ಹೇಳಲಾಗದು. ಸ್ವತಃ ಸರ್ವಜ್ಞ ಕವಿಯೂ "ಸರ್ವರೊಳಗೊಂದೊಂದು ನುಡಿ ಕಲಿತು ಜ್ಞಾನದಾ

ಪರ್ವತವೇ ಆದ ಸರ್ವಜ್ಞ" ಎಂದು ಹೇಳಿದ್ದಾನೆ. ಡಮ್‌ಬಿಲ್ ಎಂಬ ಮನಶಾಸ್ತ್ರಜ್ಞರು ಹೇಳ್ತಾರೆ "ಗರ್ಭದಿಂದ ಆರಂಭವಾಗಿ ಜೀವನದ ಕೊನೆಯ ಚಟ್ಟದವರೆಗೆ ವ್ಯಕ್ತಿಯ ಜೀವನದ ಮೇಲೆ ಪ್ರಭಾವ ಬೀರುವುದೆಲ್ಲವೂ ಶಿಕ್ಷಣವೇ ಆಗಿದೆ". ಅಂದರೆ, ಜೀವನದ ಪ್ರತಿಕ್ಷಣ–ಪ್ರತಿಗಳಿಗೆಯೂ ಕಲಿಕೆಯ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಇದರ ಗ್ರಹಿಕೆ ಹಾಗೂ ಅನುಕರಣೆಗಳೇ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುತ್ತವೆ. ಆದುದರಿಂದ ತಂದೆ–ತಾಯಿಗಳು ತಮ್ಮ ಜೀವಿತಾವಧಿಯಲ್ಲಿ ಮಕ್ಕಳ ವರ್ತನೆ ಹಾಗೂ ವ್ಯವಹಾರಗಳನ್ನು ಗಮನಿಸುತ್ತಲೇ ಇರಬೇಕು. ತಪ್ಪುಗಳು ಗಮನಕ್ಕೆ ಬಂದಾಗ ತಿದ್ದಿ ಹೇಳಬೇಕು. ಹಿರಿಯರ ಮಾರ್ಗದರ್ಶನದಲ್ಲಿಯೇ ಮಕ್ಕಳು ಮುನ್ನಡೆಯಬೇಕು. ಹಿರಿಯರ ಅನುಭವ ಕಿರಿಯರಿಗೆ ಶ್ರೀರಕ್ಷೆ. ಆದುದರಿಂದಲೇ ಹೇಳೋದು "ಹಿರಿಯರಿಲ್ಲದ ಮನೆಯಲ್ಲ ದೇವರಿಲ್ಲದ ಗುಡಿಯಲ್ಲ" ಎಂದು. ಮುಪ್ಪು ಬಂತೆಂದು ಮಕ್ಕಳಿಗೆ ಮಾರ್ಗದರ್ಶನ ಮಾಡುವ ಕೆಲಸವನ್ನು ನಿಲ್ಲಿಸಕೂಡದು. ಸಂಸ್ಕಾರವಂತ ಮಕ್ಕಳೂ ಕೂಡ ಯಾವುದೊಂದು ಹೊಸ ಕಾರ್ಯ ಹಾಗೂ ಕಾರ್ಯಕ್ರಮ ಆರಂಭಿಸುವ ಮೊದಲು ಗುರು ಹಿರಿಯರ ಆಶೀರ್ವಾದ ಪಡೆದುಕೊಳ್ಳುತ್ತಾರೆ. ಆ ಆಶೀರ್ವಾದ ಹಾಗೂ ಶುಭಾಶಯವೇ ಅರ್ಥಗರ್ಭಿತ ಮಾರ್ಗದರ್ಶನ.

"ವ್ಯಕ್ತಿಯಲ್ಲಿ ಸುಪ್ತವಾಗಿರುವ ಉತ್ತಮವಾದ ಅಂಶಗಳನ್ನು ಹೊರಗೆ ತೆಗೆಯುವುದೇ ಶಿಕ್ಷಣ" ಎಂದು ಹೇಳಿದ್ದಾರೆ ಗಾಂಧೀಜಿ, ಬ್ರಹ್ಮ ಸೃಷ್ಟಿಯಲ್ಲಿ ಎಲ್ಲರಲ್ಲಿಯೂ ಒಂದು ಕಲೆ ಸುಪ್ತವಾಗಿರುತ್ತದೆ. ಅದು ಲೋಕಾರ್ಪಣೆಯಾಗಲು ಅವಕಾಶ ಸಿಗಬೇಕಷ್ಟೆ. ಅವಕಾಶ ಎಂಬ ತರಬೇತಿ ಹಾಗೂ ಶಿಕ್ಷಣ ಪ್ರಾಪ್ತವಾದರೆ ವ್ಯಕ್ತಿಯಲ್ಲಿ ಹುದುಕಿರುವ ಧೀಶಕ್ತಿ ಅನಾವರಣಗೊಳ್ಳುತ್ತದೆ. ಬುದ್ಧಿವಂತರಾದ ಪಾಲಕರು ಸೂಕ್ಷ್ಮವಾಗಿ ಇದನ್ನು ಗಮನಿಸುತ್ತಾರೆ ಹಾಗೂ ಮಗುವಿನ ಆಸಕ್ತಿ ಹಾಗೂ ಅಭಿರುಚಿಗೆ ಅನುಗುಣವಾಗಿ ಅದೇ ಕ್ಷೇತ್ರದಲ್ಲಿ ಮುನ್ನಡೆಯುವುದಕ್ಕೆ ಮಾರ್ಗದರ್ಶನ ಮಾಡುತ್ತಾರೆ. ಆಗ "ರೋಗಿ ಬಯಸಿದ್ದೂ ಹಾಲು–ಅನ್ನ, ವೈದ್ಯರು ಹೇಳಿದ್ದೂ ಹಾಲು–ಅನ್ನ" ಎನ್ನುವಂತಾಗಿ ಸಮಸ್ಯೆಗೆ ಪರಿಹಾರ ದೊರಕುವುದು ಮಾತ್ರವಲ್ಲ ಫಲವೂ ಸಂಪದ್ಭರಿತವಾಗಿರುತ್ತದೆ.

"ಮಗುವಿಗೆ ಸತ್ಯದರಿವು ಮೂಡಿಸಿ ಅದನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಗಲು ಸಹಕರಿಸುವುದೇ ಶಿಕ್ಷಣ" ಎಂದು ಹೇಳಿದ್ದಾರೆ ದಾರ್ಶನಿಕ ಸಾಕ್ರೆಟಿಸ್.

ಅಂದರೆ ಪಾಠಶಾಲೆ ಹಾಗೂ ವಿದ್ಯಾಲಯಗಳಲ್ಲಿ ಅಕ್ಷರಾಭ್ಯಾಸ ಮಾಡಿ ಮುಗಿಸಿದರೆ ಸಾಲದು. ಅಧ್ಯಯನ ಮಾಡಿದ ವಿಷಯವನ್ನು ವೈಜ್ಞಾನಿಕವಾಗಿ ಅರಿತು. ಅದರಲ್ಲಿರುವ ಸತ್ಯ–ಮಿಥ್ಯ, ಆಚಾರ–ವಿಚಾರ, ಒಳಿತು–ಕೆಡುಕುಗಳನ್ನು ತಾಳೆ ಹಾಕುತ್ತ ಸಾಗುವುದೇ ಶಿಕ್ಷಣದ ಮುಖ್ಯ ಉದ್ದೇಶವಾಗಿರುವುದರಿಂದ ಈ ದಿಶೆಯಲ್ಲಿ ಮಗುವಿನ ಪ್ರಯತ್ನಕ್ಕೆ ಬೆಂಬಲ ನೀಡುವ ಕೆಲಸ ಪಾಲಕರದ್ದು. ಆದುದರಿಂದ "ಅ.. ಆ ಇ.. ಈ.. ಕಲಿಸುವುದು ಶಿಕ್ಷಣವಲ್ಲ. ಸತ್ಯ ಶೋಧನೆಯ ವಿವೇಕವೇ ಶಿಕ್ಷಣ" ಎಂದು ಹೇಳಿದ್ದಾರೆ ಬಾಪೂಜಿ. "ವೀರ, ಧೀರ, ಸಚ್ಚರಿತ್ರ ಹಾಗೂ ಪ್ರತಿಭಾಸಂಪನ್ನರನ್ನೊಳಗೊಂಡ ಸಮಾಜವನ್ನು ನಿರ್ಮಿಸುವುದೇ ಶಿಕ್ಷಣ" ಎಂದು ಹೇಳಿದ್ದಾರೆ ಶಿಕ್ಷಣ ತಜ್ಞ ಬರ್ಟರ್ಯಾಂಡ ರಸಲ್‌ರು.

"ವ್ಯವಸಾಯದಿಂದ ಗಿಡ–ಮರಗಳನ್ನು ಫಲಭರಿತವಾಗಿ ಬೆಳೆಸುವಂತೆ ಮನುಷ್ಯನನ್ನು ಸರ್ವಗುಣ ಸಂಪನ್ನನಾಗಿ ಸಿದ್ಧಪಡಿಸಲು ಶಿಕ್ಷಣ ಸಹಾಯ ಮಾಡುತ್ತದೆ" ಎಂದು ಹೇಳಿದ್ದಾರೆ ಶಿಕ್ಷಣ ತಜ್ಞ ಜಾನ್‌ರಾಕ್. ಹದವರಿತು ನಾಟಿ ಮಾಡಿ ಸಮಯ ಸಂದರ್ಭಗಳನ್ನರಿತು ಹಿತಮಿತವಾಗಿ ನೀರುಗೊಬ್ಬರ ಹಾಕುವುದೂ ಅಲ್ಲದೇ ಅಕ್ಕಪಕ್ಕದಲ್ಲಿ ಕಸಕಳೆಗಳು ಬೆಳೆಯದಂತೆ ಪೋಷಿಸಿದಾಗ ಅಂಕುರಿತ ಬೀಜ ಫಲಭರಿತವಾಗಿ ನಿರೀಕ್ಷೆಗೂ ಮೀರಿ ಫಸಲು ಬರುತ್ತದೆ. ಪರಿಣಾಮವಾಗಿ ರೈತನ ಜೀವನದಲ್ಲಿ ನೆಮ್ಮದಿಯ ತಂಗಾಳಿ ಬೀಸುತ್ತದೆ. ಅತಿಯಾದ ನೀರು–ಗೊಬ್ಬರವೂ ಬೆಳೆಗೆ ಮಾರಕ. ಇದೇ ನಿಯಮ ಮಗುವಿನ ವಿದ್ಯಾರ್ಜನೆಯ ವಿಷಯದಲ್ಲೂ ಅನ್ವಯವಾಗುತ್ತದೆ. ವಿದ್ಯಾರ್ಜನೆಯಲ್ಲಿ ತೊಡಗಿದ ಮಗುವಿಗೆ ಎಲ್ಲಿಯೂ ಒತ್ತಡ ಕೂಡದು. ಪ್ರಾಕೃತಿಕವಾಗಿ ಬೇಕಾದಷ್ಟನ್ನು ಮಾತ್ರ ಮಾರ್ಗದರ್ಶನ ಮಾಡುತ್ತ ಸ್ವಯಂ ಬೆಳವಣಿಗೆ ಹೊಂದಲು ಬಿಡಬೇಕು. ಅಂದರೆ, ಮಗುವಿಗೆ ಪ್ರೀತಿಯನ್ನು ಧಾರೆಯೆರೆಯಬೇಕೆ ವಿನಃ ಮುದ್ದುಮಾಡಿ ಕೃತ್ರಿಮ ಬೆಳವಣಿಗೆಗೆ ಅವಕಾಶ ಮಾಡಿಕೊಡುವುದು ಸರಿಯಲ್ಲ. ಅತಿಯಾದ ನೀರು–ಗೊಬ್ಬರಗಳಿಂದ ಬೇರು ನಷ್ಟಹೊಂದಿ ಬೆಳೆಯು ಬಾರದೇ ಹೋಗುತ್ತದೆ ಎನ್ನುವ ವಿಷಯ ಪಾಲಕರಿಗೆ ತಿಳಿದಿರಲಿ.

"ಮನುಷ್ಯ ತನ್ನೆಲ್ಲ ಶಕ್ತಿ ಸಾಮರ್ಥ್ಯಗಳನ್ನು ಬಳಸಿಕೊಂಡು ತನ್ಮೂಲಕ ಪ್ರತಿಭೆಯ ಕಾರಂಜಿ ಪುಟಿಯುವಂತೆ ಮಾಡುವುದೇ ಶಿಕ್ಷಣ" ಎಂದು ಹೇಳಿದ್ದಾರೆ ಖ್ಯಾತ

ಶಿಕ್ಷಣ ತಜ್ಞ ಜಾನ್‌ಲುಯಿ. ಮಗುವಿನ ಇಚ್ಛಿತ ಕ್ಷೇತ್ರದಲ್ಲಿ ಯಶಸ್ಸು ಪಡೆಯುವುದರಲ್ಲಿ ಬರುವ ಹಲವು ಪ್ರಶ್ನೆಗಳಿಗೆ ಉತ್ತರ ಹುಡುಕುವ ದಾರಿಯಲ್ಲಿ ಪೂರಕವಾದ ಮಾರ್ಗದರ್ಶನವನ್ನು ಶಿಕ್ಷಕರು ಹಾಗೂ ಪಾಲಕರು ಮಾಡಬೇಕಾಗುತ್ತದೆ. ಇಲ್ಲಿ ತರಬೇತಿ ಹಾಗೂ ಮಾರ್ಗದರ್ಶನದೊಂದಿಗೆ ಪ್ರೇರಣೆ ಹಾಗೂ ಪ್ರೋತ್ಸಾಹವೂ ಸಹಕಾರಿಯಾಗುತ್ತದೆ. ಎಡವಿದಾಗ ಕೈಹಿಡಿದು ಮುನ್ನಡೆಸುವ ಸಹಾಯ ಹಸ್ತವನ್ನು ಶಿಕ್ಷಕರೊಂದಿಗೆ ಪಾಲಕರೂ ನೀಡಬೇಕಾಗುತ್ತದೆ.

"ಅಜ್ಞಾನ, ಮೋಸ, ವಂಚನೆ ಹಾಗೂ ದುರ್ಮಾರ್ಗದತ್ತ ಸಾಗುವುದನ್ನು ನಿಲ್ಲಿಸಿ ಜ್ಞಾನ, ಸಹಾಯ, ಸಹಕಾರ ಹಾಗೂ ನ್ಯಾಯಸಮ್ಮತ ಸನ್ಮಾರ್ಗದತ್ತ ಕೊಂಡೊಯ್ಯುವ ಪ್ರಕ್ರಿಯೆಯೇ ಶಿಕ್ಷಣ" ಎಂದು ಹೇಳಲಾಗಿದೆ ಉಪನಿಷತ್ತಿನಲ್ಲಿ. "ಅಜ್ಞಾನ ಮಾರ್ಗದಿಂದ ನಮ್ಮ ಬುದ್ಧಿಶಕ್ತಿಯನ್ನು ಜ್ಞಾನ ಮಾರ್ಗದತ್ತ ಕೊಂಡೊಯ್ಯುವುದೇ ಶಿಕ್ಷಣ" ಎಂದು ಹೇಳಿದ್ದಾರೆ. ಖ್ಯಾತ ಶಿಕ್ಷಣ ತಜ್ಞ ಎಚ್. ವೇಲ್ಸ. ಮೂಟೆಗಟ್ಟಲೆ ಪುಸ್ತಕಗಳನ್ನು ಓದುವುದು ಶಿಕ್ಷಣವಲ್ಲ. ಓದಿದ್ದನ್ನು ವ್ಯವಹಾರಿಕವಾಗಿ ಜೀರ್ಣಿಸಿಕೊಂಡು ಯಾವುದು ಸಂಕುಚಿತ, ಯಾವುದು ವಿಶಾಲ, ಯಾವುದು ದುರ್ಮಾರ್ಗ, ಯಾವುದು ಸನ್ಮಾರ್ಗ ಎಂಬುದರ ಪರಿಕಲ್ಪನೆಯನ್ನು ಮನುಷ್ಯನಲ್ಲಿ ಮೂಡಿಸುವ ಘನವಾದ ಕಾರ್ಯವೇ ಶಿಕ್ಷಣ. ಓದು ಒಕ್ಕಾಲಾದರೆ, ಬುದ್ಧಿ ಮುಕ್ಕಾಲಾಗಿರಬೇಕು. ಓದಿಯಾದ ನಂತರ ಚಿಂತನೆಯ ಮುಖಾಂತರ ದೃಢ ನಿರ್ಧಾರಕ್ಕೆ ಬರುವಂತೆ ಮಾಡುವುದೇ ಶಿಕ್ಷಣ.

ಶಿಕ್ಷಣವು ಅರಿವಿಗೆ ಅಡಿಗಲ್ಲು, ಬಾಳಿಗೆ ಒಡನಾಡಿಯಾಗಿ ಅವಿನಾಭಾವ ಸಂಬಂಧವನ್ನು ಹೊಂದಿರುವುದು. ಮಕ್ಕಳಲ್ಲಿ ಬುದ್ಧಿವಿಕಾಸ, ಆತ್ಮಸ್ಥೈರ್ಯ ಹಾಗೂ ಪವಿತ್ರತೆಗಳಿಗೆ ಒತ್ತುಕೊಟ್ಟು ಆರ್ಥಿಕ, ಸಾಮಾಜಿಕ, ಭೌಗೋಳಿಕ, ಧಾರ್ಮಿಕ, ರಾಜಕೀಯ ಹಾಗೂ ವೈಜ್ಞಾನಿಕ ಕ್ಷೇತ್ರಗಳ ಕುರಿತು ತಿಳುವಳಿಕೆ ನೀಡುವುದು ಶಿಕ್ಷಣದ ಗುರಿಯಾಗಬೇಕು. ಮಗುವಿನ ಸುಖ ಸಂತೋಷಗಳ ಜೊತೆಗೆ ನೈತಿಕ ಗುಣಗಳನ್ನು ವೃದ್ಧಿಸುತ್ತ ಪ್ರಗತಿ ಪಥದಲ್ಲಿ ನಡೆಯುವುದಕ್ಕೆ ಸಹಕಾರಿಯಾಗುವುದೇ ಶಿಕ್ಷಣ. ಜೀವನೋಪಾಯ, ನಾಗರೀಕತೆ, ಆತ್ಮ ನಿವೇದನೆ, ಸುಶೀಲತ್ವ, ಸಭ್ಯತೆ, ಸುಸಂಸ್ಕೃತ ಹಾಗೂ ಮಾನವೀಯ ಮೌಲ್ಯಗಳನ್ನು ಎತ್ತಿ ಸಾರುವ ಧ್ಯೇಯವೇ ಶಿಕ್ಷಣದ ಪರಮ ಗುರಿ.

ಶಿಕ್ಷಣವೆಂಬ ಮರಕ್ಕೆ ಮುಖ್ಯವಾಗಿ ಎರಡು ರೆಂಬೆಗಳು, ಒಂದು ಮಾನಸಿಕ ಆರೋಗ್ಯದ ರೆಂಬೆಯಾದರೆ ಇನ್ನೊಂದು ದೈಹಿಕ ಆರೋಗ್ಯದ ರೆಂಬೆ. ಇವರೆಡೂ ಸಮ–ಸಮವಾಗಿ ಆರೋಗ್ಯವಾಗಿದ್ದಾಗ ಮಾತ್ರ ಮನುಷ್ಯ ಯಶಸ್ವಿ ಜೀವನ ಯಾಪನ ಮಾಡಲು ಸಹಕಾರಿಯಾಗುತ್ತದೆ. ಉತ್ತಮ ಬುದ್ಧಿವಂತಿಕೆಯಿಂದ ಎಲ್ಲ ತೆರನಾದ ಪದವಿ, ಪುರಸ್ಕಾರ, ಇನಾಮು, ಮಾನ–ಸಮ್ಮಾನಗಳನ್ನು ಪಡೆದುಕೊಂಡರೆ ಸಾಲದು. ಅವನ ಶಾರೀರಿಕ ಆರೋಗ್ಯವೂ ಪೂರ್ಣವಾಗಿರಬೇಕು. ಅದಿಲ್ಲದೇ ಹೋದರೆ, ಸಂತೋಷ–ಸಂಭ್ರಮಗಳು ಮರೀಚಿಕೆಯಾಗಿ ನರಕ ಸದೃಶವಾಗುತ್ತದೆ. ಆದುದರಿಂದ ಪಾಠಗಳ ಜೊತೆ ಜೊತೆಗೆ ಆಟೋಟಗಳೂ ಅಷ್ಟೇ ಪ್ರಮುಖವಾದುದು ಎಂಬ ಪ್ರಮುಖ ವಿಷಯ ಪಾಲಕರಿಗೆ ತಿಳಿದಿರಲಿ. ಆಟೋಟ ಹಾಗೂ ವ್ಯಾಯಾಮಗಳು ಮನುಷ್ಯನ ಶರೀರವನ್ನು ಹೃಷ್ಟಪುಷ್ಟವಾಗಿಡಲು ಸಹಕರಿಸುತ್ತವೆ. ಶರೀರ ಸೊಣಕಲಾಗದಂತೆ ಹಾಗೂ ಬೊಜ್ಜು ಬೆಳೆದು ನಿಷ್ಕ್ರಿಯವಾಗದಂತೆ ಮಾಡುವ ಶಕ್ತಿ ವ್ಯಾಯಾಮಕ್ಕಿದೆ. ಶರೀರವು ಕ್ರಿಯಾಶೀಲತೆಯಿಂದ ಕೂಡಿದ ದೃಢಕಾಯವನ್ನು ಹೊಂದುವುದೇ ದೈಹಿಕ ಆರೋಗ್ಯದ ಗುರಿ. "ಶಾರೀರಿಕ ಶಿಕ್ಷಣವು ಕೇವಲ ಶರೀರ ಸಂವರ್ಧನೆಗೆ ಸೀಮಿತವಾಗಿರದೇ ಮಕ್ಕಳಲ್ಲಿ ಶಿಸ್ತು, ಸಂಯಮ ಹಾಗೂ ಸಹಕಾರದಂತಹ ಸದ್ಗುಣಗಳನ್ನು ಸಂವರ್ಧಿಸಿಕೊಡುತ್ತದೆ" ಎಂದು ಹೇಳಿದ್ದಾರೆ ಖ್ಯಾತ ಶಿಕ್ಷಣ ತಜ್ಞ ವಿಲಿಯಂ ಜೇಮ್ಸ್. ಆದುದರಿಂದ ಮಕ್ಕಳನ್ನು ಶಾಲಾ ಕ್ರಿಯಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವ ಕಾರ್ಯ ಪಾಲಕರಿಂದಾಗಬೇಕು.

"ಮಕ್ಕಳ ಮಾಂಸ–ಖಂಡಗಳು ಬಲಾಢ್ಯವಾಗುವಂತೆ ಮಾಡಿ ಅವರ ಮಸ್ತಿಷ್ಕದಲ್ಲಿ ಜ್ಞಾನ ಸಂಪತ್ತನ್ನು ತುಂಬುವುದರ ಜೊತೆಗೆ ಅವರನ್ನು ಸದ್ಗುಣಶೀಲರನ್ನಾಗಿ ಮಾಡುವುದೇ ಶಿಕ್ಷಣದ ಮುಖ್ಯ ಉದ್ದೇಶ" ಎಂದು ಉದ್ಗರಿಸಿದ್ದಾರೆ ಸುಪ್ರಸಿದ್ಧ ಶಿಕ್ಷಣ ತಜ್ಞ ರಾಯ್ ಮೌಂಟ. ಮಕ್ಕಳು ಎಷ್ಟೇ ಜ್ಞಾನ ಸಂಪಾದನೆ ಮಾಡಿದರೂ ಸದ್ಗುಣಗಳು ಇಲ್ಲದೇ ಹೋದರೆ ಪಡೆದ ಜ್ಞಾನವೆಲ್ಲ ವ್ಯರ್ಥವಾಗುವುದು. "ಮಕ್ಕಳು ಜ್ಞಾನದ ಜೊತೆಗೆ ಸುಶೀಲರಾಗುವಂತೆ ಮಾಡಬೇಕು" ಎಂದು ಹೇಳಿದ್ದಾರೆ ಶಿಕ್ಷಣ ತಜ್ಞ ರಾಬರ್ಟ. ಇದೇ ಮಾತನ್ನು "ಸಚ್ಚಾರಿತ್ರ್ಯ ಶಾಂತಚಿತ್ತತೆ, ಕರ್ತವ್ಯ ಪರಾಯಣತೆ ಹಾಗೂ ತ್ಯಾಗ ಮನೋಭಾವನೆಗಳನ್ನು ಬೆಳೆಸುವುದರ ಜೊತೆಗೆ

ಸುಶೀಲತ್ವ ಒಡಮೂಡುವಂತೆ ಮಾಡುವುದು ನಿಜವಾದ ಶಿಕ್ಷಣ" ಎಂದು ಹೇಳಿದ್ದಾರೆ ಬಾಪೂಜಿ. ಇನ್ನು ಡಿ.ವಿ.ಜಿ. ಯವರು.

"ಹುಲ್ಲಾಗು ಬೆಟ್ಟದಲಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ನಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ" ಎಂದು

ಸದ್ಗುಣ ಸಂಪನ್ನತೆಯಿಂದ ಸಮಾಜದ ಎಲ್ಲ ಜನರೊಂದಿಗೆ ಬೆರೆತು ಅವರ ಕಷ್ಟ ಸುಖಗಳಲ್ಲಿ ನೆರವಾಗುವುದರೊಂದಿಗೆ ಜೀವನ ಸಾರ್ಥಕ್ಯತೆ ಪಡೆದುಕೊಳ್ಳುವಂತೆ ಸಾಗುವುದೇ ಶಿಕ್ಷಣ ಎಂದು ಹೇಳಿದ್ದಾರೆ. "ಆತ್ಮ ಪ್ರಕಾಶನ ಮತ್ತು ಪ್ರೇಮವೆಂಬ ಶಾಶ್ವತ ಸಂಪತ್ತನ್ನು ದೊರಕಿಸಿಕೊಟ್ಟು ಮಗುವನ್ನು ಸುಯೋಗ್ಯ ಹಾಗೂ ಸತ್ಯಸಂಧನನ್ನಾಗಿ ಸಮನ್ವಯಗೊಳಿಸುವುದೇ ಶಿಕ್ಷಣ" ಎಂದು ಹೇಳಿದ್ದಾರೆ ರವೀಂದ್ರನಾಥ ಟ್ಯಾಗೋರ. ಮಗುವಿನಲ್ಲಿ ತಾಳ್ಮೆ, ಸಂಯಮ, ಸಹಕಾರ, ದಯೆ, ಅನುಕಂಪ, ಮಮತೆ ಹಾಗೂ ಮಮಕಾರಗಳೂ ಸೇರಿದಂತೆ ಕರುಣಾಭಾವದಿಂದ ಜಗದ ಚರಾಚರ ಪ್ರಾಣಿಗಳನ್ನು ಬದುಕಲು ಬಿಟ್ಟು ಸಹ ಬಾಳ್ವೆಯ ವ್ಯಕ್ತಿತ್ವವನ್ನು ರೂಪಿಸುವುದೇ ಶಿಕ್ಷಣ. ಸಮಾಜದಲ್ಲಿ ಎಲ್ಲರನ್ನೂ ಗೌರವದಿಂದ ಕಾಣಬೇಕು. ಪರನಿಂದೆಯಿಂದ ದೂರವಿದ್ದು ಆತ್ಮ ಸ್ತುತಿಗೆ ಅವಕಾಶ ಕೊಡದೇ ಮೃದು ವಚನ ಸ್ವರ್ಗಕ್ಕೆ ದಾರಿ. ವಿನಮ್ರತೆ, ಸೌಜನ್ಯ ಹಾಗೂ ಸುಶೀಲತ್ವಗಳು ಸಾಮಾಜಿಕ ಜೀವನದ ಶಿಸ್ತಿನ ಲಕ್ಷಣಗಳು. "ಜಗದ ಎಲ್ಲ ವಸ್ತುಗಳೂ ಒಳ್ಳೆಯದೇ ಆಗಿರುವುದರಿಂದ ಅದರೊಟ್ಟಿಗೆ ಬೆಳೆಯುವುದಕ್ಕೆ ಮಗುವನ್ನು ಬೆಳೆಯಲು ಬಿಡಬೇಕೆ ವಿನಃ ಮಾತಿನ ಮೂಲಕ ಶಿಕ್ಷಣ ಬೇಡ" ಎಂದು ಹೇಳಿದ್ದಾರೆ ಖ್ಯಾತ ಶಿಕ್ಷಣ ತಜ್ಞರಾದ ಜೀನ್ ರೋಸೊ. ನಿಸರ್ಗಪ್ರಿಯರಾದ ರೋಸೋ ಹೇಳ್ತಾರೆ "ಶಿಸ್ತಿನ ಹೆಸರಿನಲ್ಲಿ ಮಕ್ಕಳ ಮನಸ್ಸಿನಲ್ಲಿ ಇಲ್ಲಸಲ್ಲದ ವಿಷಯಗಳನ್ನು ಒತ್ತಾಯಪೂರ್ವಕವಾಗಿ ತುರುಕದೇ ನಿಸರ್ಗದ ಸಹಜ ಕ್ರಿಯೆಯಲ್ಲಿ ಮಕ್ಕಳ ಸಹಭಾವನೆಗಳು ಪುಟಿಯುವಂತೆ ಮಾಡಬೇಕು" ಎಂದು ಹೇಳಿದ್ದಾರೆ.

ಮಕ್ಕಳಲ್ಲಿ ದೇಶಪ್ರೇಮ, ತ್ಯಾಗ, ಬಲಿದಾನ, ನಿಸ್ವಾರ್ಥ ಸೇವೆ ಹಾಗೂ ಸತ್ಯ–ಸಂಧತೆಯ ಸದ್ಗುಣಗಳು ಬೆಳೆಯುವುದಕ್ಕೆ ಪಾಲಕರು ಪೂರಕವಾದ ವಾತಾವರಣ

ಈ ಪುಸ್ತಕದ ಆಯ್ದ ಕೆಲವೇ ಕೆಲವು ಪುಟಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.
ಸಂಪೂರ್ಣ ಪುಸ್ತಕಕ್ಕಾಗಿ ಸಂಪರ್ಕಿಸಿ:

ನಿರುತ ಪಬ್ಲಿಕೇಷನ್ಸ್

#326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,
ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,
ಬೆಂಗಳೂರು-560056. ದೂ: 080-23213710, 8073067542

ಇಮೇಲ್: nirutapublications@gmail.com

www.nirutapublications.org

ಲೇಖಕರ ಹೆಜ್ಜೆ ಗುರುತು

ಶಿಕ್ಷಣ : ಪ್ರಾಥಮಿಕ ಶಿಕ್ಷಣ ಬಾಗಲಕೋಟೆ ಜಿಲ್ಲೆಯ ಬಾರೆಹಣ್ಣಿನ ಬೆಣ್ಣೂರು. ಪ್ರೌಢ ಶಿಕ್ಷಣ, ಸ್ನಾತಕ ಬಾಗಲಕೋಟೆ ಬಿ.ವ್ಹಿ.ವ್ಹಿ. ಶಿಕ್ಷಣ ಸಂಸ್ಥೆಯಲ್ಲಿ, ಸ್ನಾತಕೋತ್ತರ ಶಿಕ್ಷಣ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಇನ್ನು ಶಿಕ್ಷಣ ಸ್ನಾತಕ ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ.

ವೃತ್ತಿ : ವೃತ್ತಿ ಜೀವನದ ಆರಂಭ ಕರಣಿಕನಾಗಿ ನೀರಾವರಿ ಇಲಾಖೆಯಲ್ಲಿ ಒಂದು ವರ್ಷದ ಸೇವೆ. ದಾವಣಗೆರೆ ಜಿಲ್ಲೆಯ ಹಿರೇ ಕೋಗಲೂರಿನಲ್ಲಿ ಸರಕಾರಿ ಪ್ರೌಢಶಾಲೆಯಲ್ಲಿ ಸಹ ಶಿಕ್ಷಕನಾಗಿ ಮೂರು ವರ್ಷ ಸೇವೆ. ಭಾರತೀಯ ವಾಯುಸೇನೆಯಲ್ಲಿ ಶಿಕ್ಷಣ ಅನುದೇಶಕನಾಗಿ ಮೂರು ವರ್ಷ. ಉದ್ದಿಮೆಗಳ ಮಂತ್ರಾಲಯದಲ್ಲಿ ಅನುವಾದ ಅಧಿಕಾರಿಯಾಗಿ ಒಂದು ವರ್ಷ ಸೇವೆ, ಕೇಂದ್ರ ಸರಕಾರದ ಕಾರ್ಮಿಕ ಇಲಾಖೆಯಲ್ಲಿ ಸಹ ನಿರ್ದೇಶಕನಾಗಿ ಇಪ್ಪತ್ತೇಳು ವರ್ಷಗಳ ಸೇವೆ. ಸರಕಾರಿ ಸೇವೆಯಿಂದ 2013ರಲ್ಲಿ ನಿವೃತ್ತಿ. 2015 ರಿಂದ ಕರ್ನಾಟಕದ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ಒಂದಾದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದಲ್ಲಿ ನೌಕರರ ಕ್ಷೇಮಾಭಿವೃದ್ಧಿಯ ಮುಖ್ಯಸ್ಥನಾಗಿ ಕಾರ್ಯನಿರ್ವಹಣೆ.

ಪ್ರವೃತ್ತಿ : ಕನ್ನಡ ಹಾಗೂ ಹಿಂದಿ ಭಾಷೆಗಳಲ್ಲಿ ಸಾಹಿತ್ಯ ಕೃಷಿ ಕಾರ್ಯ. 2011 ರಲ್ಲಿ 'ಹರಿದ ನೀರು' ಕಥಾ ಸಂಕಲನ, 2012ರಲ್ಲಿ 'ಸಮರ್ಪಿತಾ' ಹಿಂದಿ ಕಾದಂಬರಿ, 2018ರಲ್ಲಿ 'ಇ.ಎಸ್.ಐ. ಮಾರ್ಗದರ್ಶಿ' ಕಾರ್ಮಿಕರಿಗೆ ಫಲಾನುಭವ ಮಾಹಿತಿ ಪುಸ್ತಕ, 2019ರಲ್ಲಿ 'ದೊಡ್ಡಕ್ಕ ರಾಜಮಾ' ಸಾಮಾಜಿಕ ಕಾದಂಬರಿ ಪ್ರಕಟ. 2002 ರಲ್ಲಿ ಎಚ್.ಎಂ.ಟಿ. ಕಥಾ ಪ್ರಶಸ್ತಿ.

ಹವ್ಯಾಸ : ಇಪ್ಪತ್ತೈದು ವರ್ಷಗಳ ಕಾಲ ಆಕಾಶವಾಣಿ ಬೆಂಗಳೂರು ನಿಲಯದಿಂದ ಹಿಂದಿ ಪಾಠಗಳ ಪ್ರಸ್ತುತಿ. ಮಹಿಳಾ ಪ್ರಾಧಾನ್ಯತೆಯನ್ನು ಬಿಂಬಿಸುವ ಹಲವಾರು ಕಥೆಗಳು ತುಷಾರ, ಮಲ್ಲಿಗೆ, ಕರ್ಮವೀರ, ಸುಧಾ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಸಾಧನೆ: ಇ.ಎಸ್.ಐ. ಇಲಾಖೆಯ ನೌಕರರ ಜ್ಞಾನ ಕೌಶಲ ಅಭಿವೃದ್ಧಿಗಾಗಿ ಬೆಂಗಳೂರು, ಚೆನ್ನೈ, ಕೋಯಮತ್ತೂರು, ತ್ರಿಚೂರ, ಗೋವಾ ಹಾಗೂ ಹೈದರಾಬಾದ್‌ಗಳಲ್ಲಿ ತರಬೇತಿ ಕಾರ್ಯಕ್ರಮಗಳ ಆಯೋಜನೆ. 2010 ರಲ್ಲಿ ಭಾರತ ಸರಕಾರದಿಂದ ಪ್ರಾಯೋಜಿತ ವಿದೇಶ ಪ್ರವಾಸ ಕಾರ್ಯಕ್ರಮದಲ್ಲಿ ಕಾರ್ಮಿಕ ಇಲಾಖೆಯ ಪ್ರತಿನಿಧಿಯಾಗಿ ದಕ್ಷಿಣ ಆಫ್ರಿಕದ ಜೋಹಾನ್ಸ ಬರ್ಗ, ಸನ್‌ಸಿಟಿ ಹಾಗೂ ಕೇಪಟಾನ್ ಸಮಾವೇಶಗಳಲ್ಲಿ ಪಾಲ್ಗೊಳ್ಳಲಾಯಿತು. ಬೆಂಗಳೂರಿನ ಪರಿಪೂರ್ಣ ಭಾಷಾಂತರ ಕೇಂದ್ರದ ಮುಖಾಂತರ ಸರಕಾರದ ಹಲವು ಇಲಾಖೆ ಹಾಗೂ ನ್ಯಾಯಾಲಯಗಳಿಗೆ ಪ್ರಸ್ತುತಪಡಿಸಲು ಕನ್ನಡ–ಹಿಂದಿ–ಇಂಗ್ಲೀಷ್ ದಾಖಲೆಗಳ ಸಾವಿರಾರು ಪುಟಗಳ ಅನುವಾದ.

ಈ ಪುಸ್ತಕದ ಆಯ್ದ ಕೆಲವೇ ಕೆಲವು ಪುಟಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.
ಸಂಪೂರ್ಣ ಪುಸ್ತಕಕ್ಕಾಗಿ ಸಂಪರ್ಕಿಸಿ:

ನಿರುತ ಪಬ್ಲಿಕೇಷನ್ಸ್

#326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,
ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,
ಬೆಂಗಳೂರು-560056. ದೂ: 080-23213710, 8073067542

ಇಮೇಲ್: nirutapublications@gmail.com

www.nirutapublications.org

NIRUTA PUBLICATIONS ನಿರುತ ಪಬ್ಲಿಕೇಷನ್ಸ್

ಲೇಖಕರು ತಮ್ಮ ಪುಸ್ತಕಗಳ ಪ್ರಕಾಶನಕ್ಕಾಗಿ ಸಂಪರ್ಕಿಸಬಹುದು.

ಈ ಕೆಳಕಂಡ ಪುಸ್ತಕಗಳು ಪ್ರಸ್ತುತ ನಿರಾತಂಕ ಕಚೇರಿಯಲ್ಲಿ ದೊರೆಯುತ್ತವೆ.

ಕ್ರ.ಸಂ	ಪುಸ್ತಕದ ಹೆಸರು	ಲೇಖಕರು	ಬೆಲೆ
1.	ಮಡಿಲಿಗೊಂದು ಮಗು	ಪದ್ಮಸುಬ್ಬಯ್ಯ	130/-
2.	ಸಮಾಜಕಾರ್ಯ ಮತ್ತು ಸಮುದಾಯ ಅಭಿವೃದ್ಧಿ	ಎನ್.ಬಿ. ಮುನಿರಾಜು	250/-
3.	ಅರ್ಧನಾರೀಶ್ವರ	ಎಂ. ಬಸವಣ್ಣ	50/-
4.	ಆತ್ಮೀಯರು	ಪ್ರೊ. ಎಚ್.ಎಂ.ಮರುಳಸಿದ್ಧಯ್ಯ	200/-
5.	ಪ್ರಶಸ್ತಿ	ಆರ್. ಉಷಾ	70/-
6	ಆರೋಗ್ಯವೇ ಭಾಗ್ಯ	ಶಿವಾನಂದಯ್ಯ	100/-
7.	ಸಮಾಜಕಾರ್ಯದ ಶಬ್ದಕೋಶ	ಪ್ರೊ. ಎಚ್.ಎಂ.ಮರುಳಸಿದ್ಧಯ್ಯ	75/-
8.	ಡಾ.ಎಚ್.ಎಂ.ಮರುಳಸಿದ್ಧಯ್ಯ (ಜೀವನದ ಕೆಲವು ಸೆಳಕುಗಳು)	ಕೆ. ಭೈರಪ್ಪ	100/-
9.	ಪರಿವರ್ತನೆ	ಕೆ.ವಿ. ರಾಮ್	150/-
10.	ಸಮಾಜಸೇವೆಯ ಮಿನುಗುತಾರೆ ಮೀನಾ	ಕೆ.ವಿ. ರಾಮ್	150/-
11.	ವೃತ್ತಿ ಮಾಹಿತಿ ಕೈಪಿಡಿ (ಭಾರತೀಯ ಹಿನ್ನೆಲೆಯಲ್ಲಿ)	ಮೋಹನ್ ದಾಸ್	550/-
12.	ಸನ್ಮಾರ್ಗ	ಡಾ. ಸಿ.ಆರ್. ಗೋಪಾಲ್	350/-
13.	ಕಾಡುಮಲ್ಲಿಗೆ	ಎಂ.ಎಸ್.ಶ್ರೀವತ್ಸ, ರವಿವರ್ಮ ಸಿ.	200/-
14.	ಅಮ್ಜೆ ವಾರಾಡ್	ಡಾ. ಯಶಸ್ವಿನಿ ಬಟ್ಟಂಗಾಯ	100/-
15.	ಮಾಕುಂಟಿಯ ಮುದುಕರು	ಪ್ರೊ. ಎಚ್.ಎಂ.ಮರುಳಸಿದ್ಧಯ್ಯ	250/-
16.	ಪೊರಕೆ ಪ್ರೊಫೆಸರ್	ಡಾ॥ ಮು. ಹಾಲಪ್ಪ	40/-
17.	ಶಿಕ್ಷಣ ಮತ್ತು ಅಭಿವೃದ್ಧಿ	ಡಾ. ಭಾಗ್ಯಮ್ಮ ಎನ್.	200/-
18.	ಚಿನ್ಮಯ ಕಥಾ–ಸಂಚಯ	ಎಂ.ಎಂ. ಹಿರೇಮಠ	80/-
19.	ಸರ್ವರಿಗೂ ಆಯುರ್ವೇದ	ಡಾ. ಟಿ.ಎಂ. ಶಿವಾನಂದಯ್ಯ	300/-
20.	ಮಹಾತ್ಮಾ ಗಾಂಧೀಜಿಯವರ ತತ್ವಚಿಂತನೆಗಳ ಪ್ರಸ್ತುತತೆ	ಡಾ. ಮೌನೇಶ್ವರ ಶ್ರೀನಿವಾಸರಾವ್	100/-
21.	ಶ್ರೀ ಪೆಟ್ಟೆರಾಯ ಸ್ವಾಮಿಯ ಧಾರ್ಮಿಕ ಹಿನ್ನೆಲೆ	ಪ್ರವೀಣ್‌ಕುಮಾರ್ ಎಸ್. ಡಾ.ದೊಡ್ಡಹನುಮಯ್ಯ ಬಿ.ಹೆಚ್.	100/-

22.	ವ್ಯಕ್ತಿಗತ ಸಮಾಜಕಾರ್ಯದ ಪರಿಚಯ	ಗಂಗಾಧರ ರೆಡ್ಡಿ ಎನ್. ರಮೇಶ ಎಂ.ಎಚ್.	175/-
23.	ಸಮಾಜಕಾರ್ಯ	ಡಾ. ರಮೇಶ ಎಂ. ಸೋನಕಾಂಬಳೆ	250/-
24.	ಹಿಮನಾ ಸಮಗ್ರ ಕವನಗಳು	ಎಚ್.ಎಂ. ಹರ್ಷ	200/-
25.	ಮಾನವ ಸಂಪನ್ಮೂಲ ಮಾರ್ಗದರ್ಶಿ	ರಾಮ್ ಕೆ. ನವರತ್ನ	225/-
26.	ಕಾಡುಗೊಲ್ಲ ಮಹಿಳೆ: ಸಾಂಸ್ಕೃತಿಕ ಸಂಕಥನ	ಡಾ. ಹೆಚ್.ಆರ್. ರೇಣುಕ	120/-
27.	ಸಮುದಾಯ ಸಂಘಟನೆ	ಡಾ. ಸಿ.ಆರ್. ಗೋಪಾಲ್	400/-
28.	ಇ.ಎಸ್.ಐ. ಮಾರ್ಗದರ್ಶಿ	ಎಚ್.ಎನ್. ಯಾದವಾಡ	125/-
29.	ಬದುಕು ಬದಲಾಯಿಸಿದ ಕಥನಗಳು	ಶೇಖರ್ ಗಣಗಲೂರು	160/-
30.	ಕಾರ್ಮಿಕ ಬಾಂಧವ್ಯಗಳ ಯಶಸ್ವಿ ನಿರ್ವಹಣೆ	ಗೋವಿಂದರಾಜು ಎನ್.ಎಸ್	375/-
31.	ಸಮಾಜಕಾರ್ಯದಲ್ಲಿ ಮನೋವಿಜ್ಞಾನ	ಪ್ರದೀಪ ಎಂ.ಪಿ.	290/-
32.	ಭಾಷಣ ಕೈಪಿಡಿ	ಡಾ. ಸಿ.ಆರ್. ಗೋಪಾಲ್	200/-
33.	ವೃಂದಗತ ಸಮಾಜಕಾರ್ಯ	ಡಾ. ಸಿ.ಆರ್. ಗೋಪಾಲ್	250/-
34.	ಗೆಲುವು	ಶೇಖರ್ ಗಣಗಲೂರು	299/-
35.	ವಿಪತ್ತು ನಿರ್ವಹಣೆಯಲ್ಲಿ ಸಮಾಜಕಾರ್ಯ	ಗಂಗಾಧರ ರೆಡ್ಡಿ ಎನ್. ಡಾ. ಲೋಕೇಶ ಎಂ.ಯು.	320/-
36.	ಬದುಕಿನಾನಂದ ಕಲೆ	ಜಿ.ಎಸ್. ಲಕ್ಷ್ಮೀಪ್ರಸಾದ್	350/-
37.	ಮನೋ–ವೈದ್ಯಕೀಯ ಸಮಾಜಕಾರ್ಯ	ಡಾ. ಲೋಕೇಶ್ ಎಂ.ಯು. ಪವಿತ್ರ ಎ.ವಿ.	150/-
38.	ಸಾಮಾಜಿಕ ಕ್ರಿಯಾಚರಣೆ	ಡಾ. ಸಿ.ಆರ್. ಗೋಪಾಲ್	*****
39.	Indian Street Children	Koduru Venkatesh	75/-
40.	Social Discrimination Against Persons With Disabilities and Their Rehabilitation in Karnataka	Kannakanti Parameshwar	550/-

** ಮುಂದಿನ ಪ್ರಕಟಣೆ.*

41.	Social Exclusion Inclusion Continuum: A Paradigm Shift	V. Ramakrishna	600/-
42.	Social Work And Social Welfare	Shankar Pathak	695/-
43.	Social Work And Social Welfare (subsidized under the NBT)	Shankar Pathak	245/-
44.	Teen Suicide	Koduru Venkatesh	150/-
45.	Social Policy, Social Welfare and Social Development	Shankar Pathak	400/-
46.	Old age in an Indifferent Society	T.K. Nair	200/-
47.	Community Work : Theories, Experiences and Challenges	Venkat Pulla et,al	350/-
48.	UGC NET Social Work	Ramesha M.H. et,al	750/-
49.	Social Work Profession in India: An Uncertain Future	T.K. Nair	500/-
50.	Ageing in an Indian City	T.K. Nair	200/-
51.	Corporates & Social Responsibility	K.N. Ajith	150/-
52.	Karnataka Ngo's Directory	Ramesha M.H. et,al	750/-
53.	Noam Chomsky's Discourse On Globalization And U.S.' Imperialism: Implications To Social Action In India	Ashok Antony D'Souza	500/-

54.	A Holistic Approach to Literacy in India	Koduru Venkatesh	75/-
55.	Scientific Writing and Publishing in Social Work	Ilango Ponnuswami. et,al	850/-
56.	Technology In Business: A Competitive Edge for Organizations	P.Paramashivaiah. et,al	600/-
57.	International Conference on Leveraging Operations & IT for Sustainable Development	Om Prakash. C. et,al	800/-
58.	Emerging Trends in Management	Shiva Shankar. K.C	750/-
59.	New Vistas and Horizons in Management	Shiva Shankar. K.C.	750/-
60.	Handbook of Career Information : Indian Context	Mohan Das et,al	550/-
61.	New Age Banking in India-Issues and Challenges	Pallavi S. Kusugal et,al	650/-
62.	Older People in Rural Tamilnadu	T.K. Nair	179/-
63.	Contemporary Issues in Venture Capital Financing in India	Dr. C. Vishwanatha Reddy	475/-

64.	Social Development through Social Work	Ashok Antony D'Souza	350/-
65.	Challenges in Achieving Food Security in India	Mohan Das et,al.	350/-
66.	Introducing GST and Its Impact on Indian Economy	Dr. P.Paramashivaiah et,al	500/-
67.	Business Education and Employability: Challenges and New Directions	P.S. Yadapadithaya et,al.	950/-
68.	Indian Womens Empowerment from Harappa Mohenjo Daro Period to Modern Time	K.V. Ram	150/-
69.	Financial Sector Reforms in India	Dr. G.T. Govindappa et,al.	800/-
70.	Undergraduate Physics (Volume II)	Mangala Gowri M. et,al.	190/-
71.	Undergraduate Physics (Volume III)	Dr. Ramakrishna G. et,al.	220/-
72.	Undergraduate Physics (Volume IV)	Mangala Gowri M. et,al.	250/-
73.	Great Patriotic Indian Women from Early Centuries to the 20th Century	K.V. Ram	40/-
74.	Smart Cities in India : A Road Ahead	Dr. P.Paramashivaiah et,al.	300/-
75.	Vocational Rehabilitation of Disabled in India	Narasimham Rayadurgam	450/-

76.	Managing Labour Relations	Govindaraju N.S	375/-
77.	India's Changing Paradigm: Skills and Entrepreneurship for Global Competitiveness	K.B. Akhilesh	350/-
78.	A Guide to The Factories Act, 1948, The Karnataka Factories Rules 1969	Dr. Narayanappa T.V.	900/-
79.	Be a Job Coach	Beena Krishnamurthy Meena Jain	350/-

Discounts available to Libraries and bulk orders of 20 books or more

Niruta books available online : amazon.in, flipkart

NIRUTA PUBLICATIONS

326, 2nd Floor, Opp. Canara Bank, Near Dr. AIT College, Kengunte, Mallathahalli, Bengaluru - 560056.
Mob : 9980066890, Off : 080-23213710, 8073067542
Email : nirutapublications@gmail.com
Visit : www.nirutapublications.org
www.mhrspl.com

Mode of Payment

You can Deposit/Transfer the amount or send DD/Cheque in favour of **Niruta Publications**

Bank Details :
Niruta Publications
A/C No: 04621400000215
IFSC Code : CNRB0010462

Address :
Canara Bank
Kengeri Satellite Town Branch
Bengaluru-560060

ಲೇಖಕರು:
ಎಚ್.ಎನ್. ಯಾದವಾಡ

ಶಿಕ್ಷಣದ ರಥ ನೀತಿ ಪಥದ ಮೇಲೆ ಚಲಿಸಬೇಕು. ತಂದೆ ತಾಯಿ ಮಕ್ಕಳಿಗೆ ದಾರಿದೀಪವಾಗಿ ಮಾರ್ಗದರ್ಶನ ಮಾಡಬೇಕು. ಇದರಿಂದ ಮಕ್ಕಳು ವಂಚಿತರಾದರೆ ನೈತಿಕ ಹಾಗೂ ಸಾಂಸ್ಕೃತಿಕವಾಗಿ ಬೆಳೆಯುವ ಮಗುವು ದುರಂತವನ್ನು ಕಂಡೀತು ಎಂಬ ಸಂಕೇತವನ್ನು ಈ ಶೈಕ್ಷಣಿಕ ಗ್ರಂಥದ ಮುಖಾಂತರ ಗ್ರಂಥ ಕರ್ತೃ ನಮ್ಮ ಎಚ್. ಎನ್. ಯಾದವಾಡ ಪ್ರತಿಪಾದಿಸಿದ್ದಾರೆ.

ಮಗುವಿಗೆ ಮನೆಯು ಮೊದಲ ಪಾಠ ಶಾಲೆ, ಅನುಕರಣೆ ಅದರ ಹುಟ್ಟು ಗುಣ. ಬೇವು ಬಿತ್ತಿ ಮಾವು ಬೆಳೆಯಲಾಗದು ಎಂದು ಹೇಳುವ ಲೇಖಕರು ಶಾಲಾ ಪರಿಸರದಲ್ಲಿ ಸಹಪಾಠಿಗಳೊಂದಿಗೆ ಬೆರೆತು ಬೆಳೆಯುವ ಮಗುವಿಗೆ ಶಿಸ್ತು, ಸಂಯಮ ಹಾಗೂ ಆದರ್ಶಗುಣಗಳನ್ನು ಹೊಂದಲು ಪಾಲಕರು ಮುಂದಾಗಬೇಕು. ನೈತಿಕತೆಯ ನೆಲೆಗಟ್ಟಿನಲ್ಲಿ ಮಕ್ಕಳನ್ನು ಸಭ್ಯ ನಾಗರೀಕರನ್ನಾಗಿ ರೂಪಿಸುವಲ್ಲಿ ಪಾಲಕರ ಪಾತ್ರ ಅನನ್ಯವಾದುದು ಎಂದು ಹೇಳುವುದೇ ಈ ಶೈಕ್ಷಣಿಕ ಕಿರು ಹೊತ್ತಿಗೆಯ ಕಥಾನಕ.

ಶ್ರೀ ಎಚ್.ಎನ್. ಯಾದವಾಡ ಕರ್ನಾಟಕ ಸರಕಾರ ಹಾಗೂ ಭಾರತ ಸರಕಾರದ ಸೇವೆಯ ಹಲವು ಮಜಲುಗಳನ್ನು ದಾಟಿ ಅಂತಿಮವಾಗಿ ಕೇಂದ್ರ ಸರಕಾರದ ಕಾರ್ಮಿಕ ಇಲಾಖೆಯಲ್ಲಿ ಸಹ ನಿರ್ದೇಶಕರಾಗಿ ಅಪಾರ ಅನುಭವ ಹೊಂದಿದ್ದಾರೆ. ಮುಂಬರುವ ದಿನಗಳಲ್ಲಿ ಅವರಿಂದ ಇನ್ನಷ್ಟು ಕೃತಿಗಳು ರಚನೆಯಾಗಲಿ ಹಾಗೂ ಪ್ರಗತಿ ಪಥದಲ್ಲಿ ಮುನ್ನಡೆಯಲಿ ಎಂದು ಮನದುಂಬಿ ಹಾರೈಸುತ್ತೇನೆ.

– ಎಸ್. ಜಿ. ಕೋಟಿ
ವಿಶ್ರಾಂತ ಶಿಕ್ಷಣಾಧಿಕಾರಿಗಳು,
ಮಾಜಿ ಅಧ್ಯಕ್ಷರು, ಕ.ಸಾ.ಪ., ಬಾಗಲಕೋಟ
ಹಾಗೂ ಉಪಾಧ್ಯಕ್ಷರು, ಅಭಾಸಾಪ, ಕರ್ನಾಟಕ ರಾಜ್ಯ

ISBN : 978-93-84262-74-7

ಬೆಲೆ : 110-00

ನಿರುತ ಪಬ್ಲಿಕೇಷನ್ಸ್
ನಿರಾತಂಕ, 326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,
ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,
ಬೆಂಗಳೂರು-560056. ದೂ : 080-23213710, 8073067542
Email : nirutapublications@gmail.com
Visit : www.nirutapublications.org, www.mhrspl.com